# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಜನವರಿ 05, 2021

ಸಂಪುಟ : 47 ಸಂಚಿಕೆ : 246 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com





# ನ್ಯಾಯದ ವ್ಯಾಪಾರ ಮಾಡಿ, ಮೋಸ ಬೇಡ

## ಎಪಿಎಂಸಿಯಲ್ಲಿ ಹಣ್ಣಿನ ಮಾರುಕಟ್ಟೆ ಉದ್ಘಾಟಿಸಿದ ಶಾಸಕ ಶಾಮನೂರು ಶಿವಶಂಕರಪ್ಪ

ದಾವಣಗೆರೆ, ಜ. 4- ನ್ಯಾಯದ ವ್ಯಾಪಾರ ಮಾಡಿ. ಗ್ರಾಹಕರಿಗೆ, ರೈತರಿಗೆ ಮೋಸ ಮಾಡಬೇಡಿ ಎಂದು ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಎಪಿಎಂಸಿ ವರ್ತಕರಿಗೆ ಕರೆ ನೀಡಿದರು.

ನಗರದ ಎಪಿಎಂಸಿ ಆವರಣದಲ್ಲಿ ನಿರ್ಮಿಸಲಾದ ನೂತನ ಹಣ್ಣಿನ ಮಾರುಕಟ್ಟೆ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದಿಂದ ಪೂರ್ಣ ಸೌಲಭ್ಯಗಳು ದೊರಕುವುದು ವಿರಳ. ಸಿಕ್ಕಾಗಿ ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೃಷಿ ಉತ್ಪನ್ನ ಮಾರುಕಟ್ಟೆಗೆ ಸರ್ಕಾರದಿಂದ ಯಾವುದೇ ಸಹಾಯ ಧನ ದೊರೆಯುವುದಿಲ್ಲ. ಆದರೆ ನಾನು ಸಚಿವನಾಗಿದ್ದಾಗ ಎಪಿಎಂಸಿಗೆ ಅನುದಾನ ನೀಡುವಂತೆ ಒತ್ತಾಯಿಸಿದ್ದೆ. ಒತ್ತಡಕ್ಕೆ ಮಣಿದು ಸರ್ಕಾರ 750 ಕೋಟಿ ರೂ. ಅನುದಾನ ನೀಡಿತ್ತು. ಆ ಅನುದಾನದಲ್ಲಿ ದಾವಣಗೆರೆ ಎಪಿಎಂಸಿಗೆ 250 ಕೋಟಿ ರೂ.ಗಳಷ್ಟು ಅನುದಾನ ನೀಡಿದ್ದೆ. ಆ ವೇಳೆ ರಾಣೇಬೆನ್ನೂರು ಶಾಸಕರು ದಾವಣಗೆರೆಗೆ ಹೆಚ್ಚಿನ ಅನುದಾನ ನೀಡಿ ಉಳಿದೆಡೆ ಕಡಿಮೆ ಕೊಟ್ಟಿದ್ದಾರೆಂದು ವಿರೋಧಿಸಿದ್ದೂ ಉಂಟು ಎಂದು ನೆನಪಿಸಿಕೊಂಡರು.

> **ಎಪಿಎಂಸಿಯಲ್ಲಿ ಕೋಲ್ಡ್ ಸ್ಟೋರೇಜ್‌ಗೆ ಈಗಾಗಲೇ ಜಾಗ ಗುರುತಿಸಲಾಗಿದೆ. ಸರ್ಕಾರ ಅನುದಾನ ನೀಡುವುದಾಗಿ ಭರವಸೆ ನೀಡಿದ್ದು, ಬಹುದಿನದ ಬೇಡಿಕೆ ಈಡೇರಲಿದೆ.**
>
> **- ಅಣಜಿ ಚಂದ್ರಶೇಖರ್, ಎಪಿಎಂಸಿ ಅಧ್ಯಕ್ಷ**

ಇದೀಗ ಬ್ಯಾಡಗಿ ಹೊರತುಪಡಿಸಿ ರಾಜ್ಯದ ಉಳಿದೆಲ್ಲಾ ಎಪಿಎಂಸಿಗಳು ಸರ್ಕಾರದ ಧನ ಸಹಾಯ ಪಡೆದಿವೆ ಎಂದ ಎಸ್ಸೆಸ್, ಹಲವು ವರ್ಷಗಳಿಂದ ಎಪಿಎಂಸಿ ನೌಕರರಿಗೆ ಬಡ್ತಿ ನೀಡಿರಲಿಲ್ಲ. ನಾನು ಸಚಿವನಾಗಿದ್ದಾಗ ಅವರಿಗೆ ಬಡ್ತಿ ನೀಡಿ ಪ್ರೋತ್ಸಾಹಿಸುವ ಕೆಲಸ ಮಾಡಿದ್ದೆ ಎಂದರು.

ಎಪಿಎಂಸಿ ಪ್ರಾಂಗಣದಲ್ಲಿ ಧಾನ್ಯಗಳನ್ನು ಒದಗಿಸಲು ವರ್ತಕರು ನಾಲ್ಕಾಣೆ ಭಾಗ ನೀಡುವ ಕರಾರಿನ ಮೇಲೆ ಸಿಮೆಂಟ್ ಪ್ರಾಂಗಣ ನಿರ್ಮಿಸಲಾಯಿತು. ಆದರೆ ಕೆಲವರು ಇನ್ನೂ ಆ ಹಣವನ್ನು ನೀಡಿಲ್ಲ. ವರ್ತಕರು ಕೇವಲ ವಸೂಲಿಗಷ್ಟೇ ಆದ್ಯತೆ ನೀಡದೆ ಸರ್ಕಾರದ ಸೌಲಭ್ಯ ಉಪಯೋಗಿಸಿಕೊಂಡು ತಮ್ಮ ಪಲಿನ ಹಣವನ್ನೂ ನೀಡಬೇಕು ಎಂದು ಹೇಳಿದರು.

ಪ್ರಸ್ತುತ ಎಪಿಎಂಸಿ ಕಾಯ್ದೆ ತಿದ್ದುಪಡಿ ಬಗ್ಗೆ ಪರ ವಿರೋಧದ ಚರ್ಚೆ ನಡೆಯುತ್ತಿದ್ದು ವರ್ತಕರು ಸಂಘರ್ಷಕ್ಕೆ ಇಳಿಯದೆ ವ್ಯಾಪಾರ ಮಾಡಿಕೊಂಡು ಹೋಗಬೇಕು ಎಂದು ಎಸ್ಸೆಸ್ ಕರೆ ನೀಡಿದರು.

162 ಹಮಾಲರಿಗೆ ವಸತಿ ಸೌಲಭ್ಯಕ್ಕಾಗಿ ಬೇಡಿಕೆ ಇದೆ. ಆಶ್ರಯ (2ನೇ ಪುಟಕ್ಕೆ)

# ವಿಶ್ವದ ಅತಿ ದೊಡ್ಡ ಲಸಿಕಾ ಅಭಿಯಾನ: ಮೋದಿ

## ಭಾರತದ ಸರಕುಗಳು ವಿಶ್ವದೆಲ್ಲೆಡೆ ವಿಶ್ವಾಸ ಗೆಲ್ಲುವಂತಾಗಲಿ: ಪ್ರಧಾನಿ

ನವದೆಹಲಿ, ಜ. 4 - ಕೊರೊನಾ ವೈರಸ್ ವಿರುದ್ಧ ವಿಶ್ವದ ಅತಿ ದೊಡ್ಡ ಲಸಿಕಾ ಅಭಿಯಾನ ದೇಶದಲ್ಲಿ ಆರಂಭವಾಗಲಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ನಿನ್ನೆಯಷ್ಟೇ ಎರಡು ಲಸಿಕೆಗಳಿಗೆ ಔಷಧ ನಿಯಂತ್ರಕರು ಒಪ್ಪಿಗೆ ನೀಡಿದ್ದರು.

ಭಾರತದಲ್ಲಿ ಲಸಿಕೆ ರೂಪಿಸಿರುವ ವಿಜ್ಞಾನಿಗಳು ಹಾಗೂ ತಂತ್ರಜ್ಞರಿಗೆ ಪ್ರಧಾನಿ ಅಭಿನಂದಿಸಿದ್ದು, ದೇಶಕ್ಕೆ ಅವರ ಬಗ್ಗೆ ಹೆಮ್ಮೆ ಇದೆ ಎಂದಿದ್ದಾರೆ.

ವಿಶ್ವದ ಅತಿ ದೊಡ್ಡ ಕೊರೊನಾ ಲಸಿಕೆ ಯೋಜನೆ ಆರಂಭಿಸಲು ದೇಶ ಸಜ್ಜಾಗಿದೆ. ಈ ಯೋಜನೆಗಾಗಿ ವಿಜ್ಞಾನಿಗಳು ಹಾಗೂ ತಂತ್ರಜ್ಞರು ನೀಡಿರುವ ಕೊಡುಗೆಯ ಬಗ್ಗೆ ಹೆಮ್ಮೆ ಇದೆ ಎಂದು ಮೋದಿ ಹೇಳಿದ್ದಾರೆ.

ನ್ಯಾಷನಲ್ ಮೆಟ್ರಾಲಜಿ ಕಾನ್‌ಕ್ಲೇವ್‌ನಲ್ಲಿ ವಿಜ್ಞಾನಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪ್ರಧಾನಿ, ಭಾರತದಲ್ಲಿ ರೂಪುಗೊಳ್ಳುವ ಉತ್ಪನ್ನಗಳು ಜಾಗತಿಕ ಬೇಡಿಕೆಯಷ್ಟೇ ಅಲ್ಲದೇ ಜಾಗತಿಕ ಮಾನ್ಯತೆ ಪಡೆಯುವಂತಾಗಬೇಕು ಎಂದಿದ್ದಾರೆ.

ಪ್ರಮಾಣದಷ್ಟೇ ಗುಣಮಟ್ಟವೂ ಮುಖ್ಯ. ಆತ್ಮನಿರ್ಭರ್ ಹಾದಿಯಲ್ಲಿ ನಮ್ಮ ಮಾನದಂಡಗಳೂ ಏರಿಕೆಯಾಗಬೇಕು ಎಂದವರು ತಿಳಿಸಿದ್ದಾರೆ. ಭಾರತದ ಸರಕುಗಳು ವಿಶ್ವದೆಲ್ಲೆಡೆ ತುಂಬುವುದು ಬೇಡ, ನಮ್ಮ ಸರಕುಗಳು ಗ್ರಾಹಕರ ವಿಶ್ವಾಸ ಗೆಲ್ಲಬೇಕು ಎಂದು ಮೋದಿ ಹೇಳಿದ್ದಾರೆ.

## ಲಸಿಕೆಗೆ ರಾಜ್ಯದಲ್ಲಿ 29 ಸಾವಿರ ಕೇಂದ್ರ




ಬೆಂಗಳೂರು, ಜ.4 - ಕೊರೊನಾ ಮಹಾಮಾರಿ ತಡೆಗೆ ಲಸಿಕೆ ಲಭ್ಯವಾಗುತ್ತಿದ್ದಂತೆ, ಲಸಿಕೆ ವಿತರಣೆಗೆ ರಾಜ್ಯದಲ್ಲಿ 29,451 ವಿತರಣೆ ಕೇಂದ್ರಗಳನ್ನು ಗುರುತಿಸಿ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಲಸಿಕೆ ನೀಡಿಕೆಗೆ 10,008 ಸಿಬ್ಬಂದಿಯನ್ನು ಗುರುತಿಸಲಾಗಿದೆ. ಲಸಿಕೆ ಸಂಗ್ರಹ ಹಾಗೂ ವಿತರಣೆಗೆ 2,855 ಕೋಲ್ಡ್ ಚೇನ್ ಕೇಂದ್ರಗಳು ಲಭ್ಯವಿವೆ.

ಬೆಂಗಳೂರು, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾದೇಶಿಕ ಲಸಿಕೆ ವಿತರಣಾ ಕೇಂದ್ರಗಳನ್ನು ಆರಂಭಿಸಲಾಗುತ್ತಿದೆ.

ಒಟ್ಟು 45 ಜಿಲ್ಲಾ, 146 ತಾಲ್ಲೂಕು, 206 ಸಮುದಾಯ ಮತ್ತು 2,300 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದೆ.

ಜಿಲ್ಲಾ ಕೇಂದ್ರಗಳಲ್ಲಿ ಎರಡು-ಮೂರು ತಿಂಗಳಿಗೆ ಆಗುವಷ್ಟು ಲಸಿಕೆ ಸಂಗ್ರಹಿಸಬಹುದಾದ ವಾಕ್‌ಇನ್ ಕೋಲ್ಡ್ ಸ್ಟೋರೇಜ್ ಇರಲಿವೆ.

ಇದರೊಂದಿಗೆ ರಾಜ್ಯ ಮಟ್ಟದ ವಾಕ್ ಇನ್ ಕೋಲ್ಡ್ ಸ್ಟೋರೇಜ್‌ಗಳು ಹಾಗೂ ಸಣ್ಣ ಗಾತ್ರದ ಐಸ್‌ಲೈನ್ಡ್ ರೆಫ್ರಿಜಿರೇಟರ್‌ಗಳು ಸೇರಿ 7 ಸಾವಿರ ಸ್ಟೋರೇಜ್‌ಗಳು ಲಭ್ಯ ಇರಲಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಸೂಚನೆಯಂತೆ ಮೊದಲ ಫಲಾನುಭವಿಗಳ ಪಟ್ಟಿಯನ್ನೂ ಸಿದ್ಧಪಡಿಸಲಾಗಿದೆ. ಹಂಚಿಕೆ ಸಂಬಂಧ ಈಗಾಗಲೇ ಅಧಿಕಾರಿಗಳು ಯೋಜನೆ ರೂಪಿಸಿಕೊಂಡಿದ್ದಾರೆ.

ಅಗತ್ಯ ಬಿದ್ದರೆ ಪಶುವೈದ್ಯ ಇಲಾಖೆ ಹಾಗೂ ಕೃಷಿ ಇಲಾಖೆಗೆ ಸೇರಿದ ಕೋಲ್ಡ್ ಸ್ಟೋರೇಜ್‌ಗಳನ್ನೂ ಬಳಸಲು ಆರೋಗ್ಯ ಇಲಾಖೆ ಮುಂದಾಗಿದೆ.

ಬಾಗಲಕೋಟೆ, ಚಿತ್ರದುರ್ಗ, ರಾಯಚೂರು, ಕಲಬುರಗಿ, ಬೀದರ್, ಉಡುಪಿ, ಬೆಳಗಾವಿ, ಚಿಕ್ಕಮಗಳೂರು, ರಾಮನಗರ, ದಕ್ಷಿಣ (2ನೇ ಪುಟಕ್ಕೆ)

### ಏಳನೇ ಸುತ್ತಿನಲ್ಲೂ ನಿರ್ಧಾರವಿಲ್ಲ

# ಕೃಷಿ ಕಾಯ್ದೆಗಳ ಅಂಶಗಳ ಚರ್ಚೆಗೆ ರೈತರ ನಕಾರ

ನವದೆಹಲಿ, ಜ. 4 – ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕೆಂದು ಪ್ರತಿಭಟನಾ ನಿರತ ರೈತ ಮುಖಂಡರು ಪಟ್ಟು ಹಿಡಿದಿರುವ ಕಾರಣ, ಕೇಂದ್ರ ಸರ್ಕಾರದ ಜೊತೆ ನಡೆಸಲಾದ ಏಳನೇ ಸುತ್ತಿನ ಮಾತುಕತೆಯಲ್ಲಿ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ. ಜನವರಿ 8ರಂದು ಎಂಟನೇ ಸುತ್ತಿನ ಮಾತುಕತೆಗೆ ನಿರ್ಧರಿಸಲಾಗಿದೆ.

ಸಭೆಯ ನಂತರ ಮಾತನಾಡಿರುವ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ಮುಂದಿನ ಮಾತುಕತೆಯಲ್ಲಿ ಪರಿಹಾರ ಸಿಗುವ (2ನೇ ಪುಟಕ್ಕೆ)

# ವಾದ್ರಾ ನಿವಾಸಕ್ಕೆ ಐ.ಟಿ. ಅಧಿಕಾರಿಗಳ ಭೇಟಿ

ನವದೆಹಲಿ, ಜ. 4 - ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಸೋಮವಾರ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಅಳಿಯ ರಾಬರ್ಟ್ ವಾದ್ರಾ ನಿವಾಸಕ್ಕೆ ಭೇಟಿ ನೀಡಿ, ಬೇನಾಮಿ ಆಸ್ತಿ ಕಾಯ್ದೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

ವಿಚಾರಣೆಗಾಗಿ ತೆರಿಗೆ ಕಚೇರಿಗೆ ಬರುವಂತೆ ವಾದ್ರಾಗೆ ತಿಳಿಸಲಾಗಿತ್ತು. ಆದರೆ, ಕೊರೊನಾ ನಿರ್ಬಂಧಗಳ ಕಾರಣದಿಂದಾಗಿ ಬರಲು (3ನೇ ಪುಟಕ್ಕೆ)




# ನಗರದಲ್ಲಿ ಬಿಸಿಯೂಟ ತಯಾರಕರ ಪ್ರತಿಭಟನೆ

ದಾವಣಗೆರೆ, ಜ.4- 4 ತಿಂಗಳ ಬಾಕಿ ವೇತನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್ (ಎಐಟಿಯುಸಿ) ನೇತೃತ್ವದಲ್ಲಿ ಬಿಸಿಯೂಟ ತಯಾರಕರು ನಗರದಲ್ಲಿಂದು ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದ ಬಳಿ ಕೆಲ ಕಾಲ ಪ್ರತಿಭಟನಾ ಧರಣಿ ನಡೆಸಿದ ಪ್ರತಿಭಟನಾಕಾರರು, ನಂತರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

ಕಳೆದ 18 ವರ್ಷಗಳಿಂದ ಮಧ್ಯಾಹ್ನದ ಉಪಹಾರ ಯೋಜನೆಯಡಿಯಲ್ಲಿ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಅಡುಗೆಯವರಾಗಿ ಕೆಲಸ ನಿರ್ವಹಿಸು ತ್ತಿದ್ದಾರೆ. ಆದರೆ, ಸೆಪ್ಟಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಈ 4 ತಿಂಗಳ ವೇತನವನ್ನು ಬಿಡುಗಡೆ ಮಾಡಿಲ್ಲ. ವೇತನವನ್ನೇ ನಂಬಿಕೊಂಡು ಜೀವನ ನಡೆಸುತ್ತಿದ್ದು, ವೇತನ ಬಿಡುಗಡೆಯಾಗದಿರುವುದರಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದಾಗಿ ಬಿಸಿಯೂಟ ತಯಾರಕರು ಅಳಲಿಟ್ಟರು.

> **ನಾಲ್ಕು ತಿಂಗಳ ಬಾಕಿ ವೇತನ ಶೀಘ್ರ ಬಿಡುಗಡೆಗೆ ಆಗ್ರಹ**

ಬಿಸಿಯೂಟ ತಯಾರಕರಿಗೆ ಕೂಡಲೇ 4 ತಿಂಗಳ ವೇತನ ಬಿಡುಗಡೆ ಮಾಡಬೇಕು. ಸರ್ಕಾರ ಕನಿಷ್ಠ ಕೂಲಿ ಜಾರಿಗೊಳಿಸಬೇಕು. ಬಿಸಿಯೂಟ ತಯಾರಕರ ಕಲ್ಯಾಣ ಮಂಡಳಿ ಜಾರಿಗೆ ತರಬೇಕು. ಪಿಎಫ್, ಇಎಸ್ಐ ಯೋಜನೆ ಜಾರಿಗೆ ತರಬೇಕು. ಬಿಸಿಯೂಟ ತಯಾರಕರಿಗೆ ಅಪಘಾತ ಮತ್ತು ಮರಣ ಪರಿಹಾರ 5 ಲಕ್ಷ ರೂ. ಹಣ ಜಾರಿಗೆ ತರಬೇಕು. ಅಡುಗೆ ತಯಾರಕನ್ನು (3ನೇ ಪುಟಕ್ಕೆ)

# ನಾಳಿನ ಕುರುಬರ ಜಾಗೃತಿ ಸಮಾವೇಶಕ್ಕೆ 25 ಸಾವಿರ ಜನ

ದಾವಣಗೆರೆ, ಜ. 4 - ಕುರುಬರಿಗೆ ಎಸ್‌ಟಿ ಮೀಸಲಾತಿ ಕಲ್ಪಿಸಲು ನಗರದಲ್ಲಿ ನಾಳೆ ಜ.6 ರಂದು ನಡೆಯಲಿರುವ ಕುರುಬರ ಜಾಗೃತಿ ಸಮಾವೇಶದಲ್ಲಿ 25 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸ ಲಿದ್ದಾರೆ ಎಂದು ಎಸ್‌ಟಿ ಹೋರಾಟ ಸಮಿತಿಯ ಪದಾಧಿಕಾರಿಗಳು ಹಾಗೂ ಸಮಾಜದ ಮುಖಂಡರು ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ (3ನೇ ಪುಟಕ್ಕೆ)

> **ಸಿದ್ದರಾಮಯ್ಯ ಮನವೊಲಿಕೆಗೆ ಕಾರ್ಯಕಾರಿ ಸಮಿತಿ ನಿರ್ಧಾರ**
>
> ಕುರುಬ ಸಮುದಾಯಕ್ಕೆ ಎಸ್‌ಟಿ ಮೀಸಲಾತಿ ಕಲ್ಪಿಸಬೇಕೆಂದು ನಡೆಸಲಾಗುತ್ತಿರುವ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಸಿದ್ದರಾಮಯ್ಯ ಅವರ ಮನವೊಲಿಕೆಗೆ ಮೀಸಲಾತಿ ಹೋರಾಟದ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ ಎಂದು ರಾಜ್ಯ ಸಂಚಾಲಕ (3ನೇ ಪುಟಕ್ಕೆ)

# ಗುತ್ತಿಗೆ ಕೃಷಿಗೆ ಹೋಗಲ್ಲ; ರಿಲೈಯನ್ಸ್

ನವದಹಲಿ, ಜ. 4 - ರಿಲೈಯನ್ಸ್ ಇಂಡಸ್ಟ್ರೀಸ್ ಈ ಹಿಂದೆ ಕಾರ್ಪೊರೇಟ್ ಇಲ್ಲವೇ ಗುತ್ತಿಗೆ ಕೃಷಿ ನಿರ್ವಹಿಸಿಲ್ಲ. ಈ ವಲಯಕ್ಕೆ ಬರುವ ಯೋಜನೆಯೂ ಇಲ್ಲ ಎಂದು ಕಂಪನಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

ರಿಲೈಯನ್ಸ್‌ನ ಅಂಗ ಸಂಸ್ಥೆಯಾಗಿರುವ ಜಿಯೋ ಇನ್ಫೋಕಾಮ್ ಸ್ಥಾವರಗಳ ಮೇಲೆ ದಾಳಿ ನಡೆಸುವುದನ್ನು ತಡೆಯುವಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ ದಿನವೇ ಈ ಹೇಳಿಕೆ ಬಿಡುಗಡೆ ಮಾಡಲಾಗಿದೆ. ಹಿಂಸಾಚಾರದ ಕಾರಣದಿಂದಾಗಿ ಸಾವಿರಾರು ಉದ್ಯೋಗಿಗಳ ಜೀವ ಅಪಾಯಕ್ಕೆ ಸಿಲುಕಿದೆ. (2ನೇ ಪುಟಕ್ಕೆ)

> **ಸಂಘಟಿತ ಚಿಲ್ಲರೆ ವಹಿವಾಟಿನ ಮೂಲಕ ರೈತರಿಗೆ ನೆರವಾಗಿರುವುದಾಗಿ ಕಂಪನಿ ಹೇಳಿಕೆ**

# ಅಪೌಷ್ಟಿಕ ಮಕ್ಕಳನ್ನು ಎನ್‌ಆರ್‌ಸಿಗೆ ದಾಖಲಿಸದಿದ್ದರೆ ಕ್ರಮ

## ಬಾಲ್ಯವಿವಾಹ ತಡೆಗೆ ತಂಡಗಳು ಸಕ್ರಿಯವಾಗಿ ಕೆಲಸ ಮಾಡುವಂತೆ ಜಿಲ್ಲಾಧಿಕಾರಿ ಸೂಚನೆ

ದಾವಣಗೆರೆ, ಜ.4- ಜಿಲ್ಲೆಯಲ್ಲಿ ಅಪೌಷ್ಟಿಕತೆಯಿಂದ ಬಳಲುವ ಮಕ್ಕಳನ್ನು ಎನ್‌ಆರ್‌ಸಿ ಕೇಂದ್ರಗಳಿಗೆ ದಾಖಲು ಮಾಡಬೇಕು. ತಪ್ಪಿದಲ್ಲಿ ಸಂಬಂಧಿಸಿದ ಸಿಡಿಪಿಓ, ಅಧೀಕ್ಷಕರು ಮತ್ತು ವಿಷಯ ನಿರ್ವಾಹಕರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಎಚ್ಚರಿಕೆ ನೀಡಿದರು.

ಸೋಮವಾರ ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳಾದ ಪೋಷಣ್ ಅಭಿಯಾನ ಯೋಜನೆ, ಕಿರುಸಾಲ ಯೋಜನೆ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆಯಡಿ ಜಿಲ್ಲಾ ಮಟ್ಟದ ಸಮನ್ವಯ ಸಭೆ, ಬಾಲ್ಯ ವಿವಾಹ ನಿಷೇಧ ಯೋಜನೆ, ಸ್ವಾಧಾರ ಯೋಜನೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿನ ತೀವ್ರ ಮತ್ತು ಸಾಧಾರಣ ಸೇರಿದಂತೆ ಒಟ್ಟು 225 ಅಪೌಷ್ಟಿಕ ಮಕ್ಕಳನ್ನು



ಗುರುತಿಸಲಾಗಿದೆ. ಯಾವುದೇ ಮಕ್ಕಳು ಅಪೌಷ್ಟಿಕತೆಯಿಂದ ಬಳಲಬಾರದೆಂದು ಸರ್ಕಾರ ಜಿಲ್ಲಾಸ್ಪತ್ರೆಯಲ್ಲಿ ಎನ್‌ಆರ್‌ಸಿ (ನ್ಯೂಟ್ರಿಷನ್ ರಿಹ್ಯಾಬಿಲಿಟೇಷನ್ ಸೆಂಟರ್) ತೆರೆದಿದೆ. ಅಪೌಷ್ಟಿಕತೆಯಿಂದ ಬಳಲುವ ಮಕ್ಕಳಿಗೆ ಇದೊಂದು ವರದಾನವಾಗಿದ್ದು, ಮಕ್ಕಳನ್ನು ಎನ್‌ಆರ್‌ಸಿಗೆ ದಾಖಲಿಸಬೇಕು. ತಾಲ್ಲೂಕುಗಳಲ್ಲಿ ಸಿಡಿಪಿಓಗಳು, ಅಧೀಕ್ಷಕರು, ವಿಷಯ ನಿರ್ವಾಹಕರು ಈ ಬಗ್ಗೆ ಗಮನ ಹರಿಸಿ, ಪೋಷಕರ ಮನವೊಲಿಸಿ ಈ ಮಕ್ಕಳನ್ನು ಕೇಂದ್ರಕ್ಕೆ ಸೇರಿಸಬೇಕು ಎಂದರು.

> **ಅಂಗನವಾಡಿ ಕೇಂದ್ರಗಳಲ್ಲಿ 'ಪೌಷ್ಟಿಕ ಕೈತೋಟ' ಗಳನ್ನು ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರತಿ ತಾಲ್ಲೂಕಿನಲ್ಲಿ 5 ರಿಂದ 10 ಉತ್ತಮವಾದ ಪೌಷ್ಟಿಕ ಕೈತೋಟಗಳನ್ನು ನಿರ್ಮಿಸುವ ಮೂಲಕ ರಾಜ್ಯಕ್ಕೆ ಮಾದರಿಯಾಗಬೇಕು.**
>
> **- ಮಹಾಂತೇಶ ಬೀಳಗಿ, ಜಿಲ್ಲಾಧಿಕಾರಿ**

ತಾಲ್ಲೂಕುಗಳ ಸಿಡಿಪಿಓ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರತಿಕ್ರಿಯಿಸಿ ಪೋಷಕರು ತಮ್ಮ ಮಕ್ಕಳನ್ನು ಕೇಂದ್ರಕ್ಕೆ ಸೇರಿಸಲು ಒಪ್ಪುತ್ತಿಲ್ಲ. ಏನಾದರೊಂದು ಕಾರಣ ಹೇಳುತ್ತಾರೆಂದರು.

ಸರ್ಕಾರ ಎಷ್ಟೆಲ್ಲಾ ಹಣ ಖರ್ಚು ಮಾಡಿ ಸಿಆರ್‌ಸಿ ತೆರೆದಿದೆ. ಇದೊಂದು ಮುಖ್ಯವಾದ ಯೋಜನೆಯಾಗಿದ್ದು, ಹೇಗಾದರೂ ಪೋಷಕರ ಮನವೊಲಿಸಿ ಮಕ್ಕಳನ್ನು ಎನ್‌ಆರ್‌ಸಿಗೆ ದಾಖಲಿಸಿ, ಮಕ್ಕಳನ್ನು (3ನೇ ಪುಟಕ್ಕೆ)

# ಚುನಾವಣೆ ವೈಷಮ್ಯದಿಂದ ಗುಂಪು ಘರ್ಷಣೆ: ಓರ್ವನ ಸಾವು

ಜಗಳೂರು, ಜ.4- ಗ್ರಾಮ ಪಂಚಾಯಿತಿ ಚುನಾವಣೆ ವೈಷಮ್ಯದ ಹಿನ್ನೆಲೆಯಲ್ಲಿ ಎರಡು ಗುಂಪುಗಳ ಮಧ್ಯೆ ಘರ್ಷಣೆ, ಮಾರಾಮಾರಿ ನಡೆದು ಓರ್ವ ಸಾವನ್ನಪ್ಪಿದ್ದು ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ದೇವಿಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಯ ಮಿನಿಗಾರನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಭಾನುವಾರ ರಾತ್ರಿ ನಡೆದ ಮಾರಾಮಾರಿಯಲ್ಲಿ ಗ್ರಾಮದ ನಿವೃತ್ತ ಶಿಕ್ಷಕ ಕೃಷ್ಣಪ್ಪ (70) ಮೃತಪಟ್ಟಿದ್ದಾರೆ. ವೀರೇಂದ್ರ ಎಂಬುವರು ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಿನಿಗಾರನಹಳ್ಳಿ ಎಸ್ಸಿ ಮೀಸಲು ಕ್ಷೇತ್ರದಲ್ಲಿ ತಿಪ್ಪಮ್ಮ ಗೆಲುವು ಸಾಧಿಸಿದ್ದರು. ಇವರ ಎದುರಾಳಿ ಶಶಿಕಲಾ ಶೃಂಗೇಶ್ ಸೋತಿದ್ದರು. ಚುನಾವಣಾ ವಿಷಯಕ್ಕೆ ಸಂಬಂಧಿಸಿದಂತೆ ಸೋತವರ ಹಾಗೂ ಗೆದ್ದವರ ಗುಂಪುಗಳ ಮಧ್ಯೆ (2ನೇ ಪುಟಕ್ಕೆ)

# ನಗರದ ಜೆ.ಹೆಚ್. ಪಟೇಲ್ ರಸ್ತೆ : ಏಕಮುಖ ವಾಹನ ನಿಲುಗಡೆಗೆ ಆದೇಶ

ದಾವಣಗೆರೆ, ಜ.4- ನಗರದ ಮಹಾನಗರ ಪಾಲಿಕೆ ವ್ಯಾಪ್ತಿಯ ದಕ್ಷಿಣ ಸಂಚಾರ ಪೊಲೀಸ್ ಠಾಣೆ ಸರಹದ್ದಿನಲ್ಲಿರುವ ಜೆ.ಹೆಚ್. ಪಟೇಲ್ ರಸ್ತೆಯ ಜನಸಂದಣಿ ಹಾಗೂ ವಾಹನ ದಟ್ಟಣೆಗೆ ಬಹುತೇಕ ರಸ್ತೆ ಕಿರಿದಾಗಿದ್ದು ಎರಡೂ ಕಡೆ ವಾಹನ ನಿಲುಗಡೆಯಿಂದ ರಸ್ತೆಯ ಸುಗಮ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ತೊಂದರೆ ಯಾಗುತ್ತಿರುವ ಹಿನ್ನೆಲೆಯಲ್ಲಿ ಈ ರಸ್ತೆಯನ್ನು ಏಕಮುಖ ವಾಹನ ನಿಲುಗಡೆ ರಸ್ತೆಯನ್ನಾಗಿ ಘೋಷಿಸಿ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

ಜೆ.ಹೆಚ್ ಪಟೇಲ್ ರಸ್ತೆಯ ಎರಡೂ ಬದಿ ವಾಹನಗಳ ನಿಲುಗಡೆಯ ರಸ್ತೆಯಾಗಿರುತ್ತದೆ. ಈ ರಸ್ತೆಯ ಇಂದಿನ ಜನಸಂದಣಿ (3ನೇ ಪುಟಕ್ಕೆ)

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2%) ಅರ್ಧ ಪರ್ಸೆಂಟ್ ಕಮೀಷನ್‌ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409
(ಸೈಟು, ಮನೆ ಮಾರುವವರಿಗೆ ಮಾತ್ರ ಅನ್ವಯಿಸುತ್ತದೆ, ಕೊಳ್ಳುವವರಿಗಲ್ಲ*)

**ಸೈಟುಗಳು ಮಾರಾಟಕ್ಕಿವೆ**
1) 40x60 East ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, 2) 30x50 South ನವೋದಯ ಸ್ಕೂಲ್ ಹತ್ತಿರ, 3) 30×63 South West Corner ಡಾಲರ್ಸ್ ಕಾಲೋನಿಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
Mob. 99166 12110

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x36 ಉತ್ತರ, ಡಾಲರ್ಸ್ ಕಾಲೋನಿಯಲ್ಲಿ 40x60 ಉತ್ತರ ಬನಶ್ರೀ ಲೇ ಔಟ್‌ನಲ್ಲಿ 30x40 ದಕ್ಷಿಣ.
ಧನ್ಯಕುಮಾರ್ ಶಾಮನೂರು
97415 62589
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ**
ನಾಗನೂರಿನಲ್ಲಿ ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ. : 94489 66128

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ, ವಿನಾಯಕ ಬಡಾವಣೆಯಲ್ಲಿ, 40x60 South, 70x50 Corner, 30x55 South, 80x60 East, 30x46 North
ಐನಳ್ಳಿ ಚನ್ನಬಸಪ್ಪ, ಏಜೆಂಟ್
Mob. 99166 12110

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 25×36 ಉತ್ತರ, ಡಾಲರ್ಸ್ ಕಾಲೋನಿಯಲ್ಲಿ 30×50 ಪೂರ್ವ, 30×50 ಪಶ್ಚಿಮ, ಮನೆ ಮಾರಾಟಕ್ಕಿದೆ. 25×30 ವಿದ್ಯಾನಗರ, ರಂಗನಾಥ ಬಡಾವಣೆಯಲ್ಲಿ ಪೂರ್ವ ದಿಕ್ಕಿನ
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**3 BHK ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತಾರಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೊರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
99026 88442

**ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿ ಕೊಳ್ಳಿ, ಕಡಿಮೆ ದರದಲ್ಲಿ
72046 33302

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ ಹಾಗೂ ಆಫೀಸ್ ಸಹಾಯಕರು ಬೇಕಾಗಿದ್ದಾರೆ (ದ್ವಿಚಕ್ರ ವಾಹನ ಮತ್ತು ಚಾಲನಾ ಪರವಾನಿಗೆ ಹೊಂದಿರಬೇಕು) ಸಂಪರ್ಕಿಸಿ:
70195 88900
95388 70257

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಹಳೇಪೇಟೆ ಖಂಡಪ್ಪನ ಗಲ್ಲಿಯಲ್ಲಿ 12x45 ಅಳತೆಯ AEH, ಸೋಲಾರ್, ಕಾರ್ಪೊರೇಷನ್ ವಾಟರ್ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ.94480-47506

**ಹೋಟೆಲ್ ಮಾರಾಟಕ್ಕಿದೆ**
ದಾವಣಗೆರೆ ಮಾಮಾಸ್ ಜಾಯಿಂಟ್ ರೋಡ್‌ನಲ್ಲಿರುವ ರೆಡಿ (ಚಾಲ್ತಿಯಲ್ಲಿರುವ) ಹೋಟೆಲ್ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ:
82176 97814

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 38½×40 ಪಶ್ಚಿಮ, 30x50 ಪಶ್ಚಿಮ, 30x40 ಪಶ್ಚಿಮ, ಬಾಲಾಜಿ ಲೇಔಟ್ ನಲ್ಲಿ 30x50 ಪಶ್ಚಿಮ ಮನೆ, 30x40 ಪೂರ್ವ ಮನೆ, ನಿಜಲಿಂಗಪ್ಪ ಬಡಾವಣೆ 30x35 ಉತ್ತರ ಮನೆ, 30x40 ಪೂರ್ವ ಮನೆ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಬೇಕಾಗಿದ್ದಾರೆ**
ಸಸ್ಯಹಾರಿ ಮನೆ ಅಡುಗೆ ಮಾಡುವವರು ಬೇಕಾಗಿದ್ದಾರೆ. ಮಹಿಳಾ ಅಡುಗೆ ಮಾಡುವವರಿಗೆ ಮಾತ್ರ ಅವಕಾಶ. ಕೂಡಲೇ ಈ ನಂಬರ್‌ಗೆ ಸಂಪರ್ಕಿಸಿ
70221 03376

**ಮನೆ ಬಾಡಿಗೆಗೆ ಇದೆ**
ಫಸ್ಟ್ ಫ್ಲೋರ್‌ನಲ್ಲಿ ಸಿಂಗಲ್ ಬೆಡ್‌ರೂಂ ಇರುವ ಮನೆ ಬಾಡಿಗೆಗೆ ಇದೆ. ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ ರಿಂಗ್ ರೋಡ್, ಸರ್ಕಲ್ ಹತ್ತಿರ 1ನೇ ಮೇನ್, 1ನೇ ಕ್ರಾಸ್ # 1968/32 ದಾವಣಗೆರೆ.
98800 30505

**ಬೇಕಾಗಿದ್ದಾರೆ**
ರಾಜಲಕ್ಷ್ಮಿ ಫಾರ್ಮಾ (Whole sale) ದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸ್ಟಾಕ್ ತೆಗೆಯುವುದಕ್ಕೆ ಮತ್ತು ಸ್ಟಾಕ್ ಚೆಕ್ ಮಾಡಲು ಬೇಕಾಗಿದ್ದಾರೆ. ESI. PF ಸೌಲಭ್ಯವಿರುತ್ತದೆ. ವಿಳಾಸ: ಪಿ.ಜೆ. ಬಡಾವಣೆ 7ನೇ ಮೇನ್, 7ನೇ ಕ್ರಾಸ್ ದಾವಣಗೆರೆ.
96060 48402

**ಮನೆ ಮಾರಾಟಕ್ಕೆ ಇದೆ**
1200 Sqft, ಹೊಂಡದ ರೋಡ್, ಮೇನ್ ರೋಡ್ ಪಶ್ಚಿಮ ದಿಕ್ಕಿನ 3 ಅಂತಸ್ತಿನ ಮನೆ ಸುರಭಿ ಆಸ್ಪತ್ರೆ ಪಕ್ಕ ಮಾರಾಟಕ್ಕಿದೆ.
ಸಂಪರ್ಕಿಸಿ:
99640 23807
79753 33605

**ಜಾಗ ಮಾರಾಟಕ್ಕಿದೆ**
ದಾವಣಗೆರೆ ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 12.8 ಗುಂಟೆ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**Wanted Teachers**
*(Ladies only)*
1) Engalish 01 Post B.A B.Ed English Major
2) Maths 01 Post B.Sc. B.Ed
Contact No:
95358 85997

**WANTED**
*Boys required for billing/purchase entry job with B.Com /BCA background at Food Mart Supermarket. Experienced candidates will have preferences.*
Mob. 98864 63531

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ. 'ಎ' ಬ್ಲಾಕ್ 3ನೇ ಮುಖ್ಯ ರಸ್ತೆಯಲ್ಲಿ 1 BHK ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ ಬಾಡಿಗೆ ಕೊಡಲಾಗುವುದು. ಆಸಕ್ತರು ಈ ನಂಬರಿಗೆ ಸಂಪರ್ಕಿಸಿ:
70221 03376

**ಬೇಕಾಗಿದ್ದಾರೆ**
ನಂದಿನಿ ಹೋಟೆಲ್‌ಗೆ ಭಟ್ಟರು ಬೇಕಾಗಿದ್ದಾರೆ ವಿಳಾಸ: ಶಕ್ತಿ ನಗರ 1ನೇ ಮುಖ್ಯ ರಸ್ತೆ, ಜೀನಿಯಸ್ ಶಾಲೆ ಪಕ್ಕ ದಾವಣಗೆರೆ. ಆಕರ್ಷಕ ಸಂಬಳ ಕೊಡಲಾಗುವುದು ಬೇಕಾದಲ್ಲಿ ವಿಚಾರಿಸಿ.
94835 32186

**ಮಳಿಗೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನ ಹತ್ತಿರ ಹದಡಿ ರೋಡ್ ದಾವಣಗೆರೆ.
ಫೋ. : 84315 68521

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6BHK ಮನೆ 60x44 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ, ಡ್ಯೂಪ್ಲೆಕ್ಸ್ ಮನೆ #1935/7, 10ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
99007 00091

**JOBS**
MCS ACADEMY
Training & Placement Cell
98444 92888

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಅನುಭವದ್ದವರಿಗೆ ಆದ್ಯತೆ
ಸಂಪರ್ಕಿಸಿರಿ:
94495 69627
93525 46144

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467


**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.


# ಸಮಯ ಪಾಲನೆ, ಪ್ರಾಮಾಣಿಕತೆ ರೂಢಿಸಿಕೊಳ್ಳಬೇಕು

ಮಲೇಬೆನ್ನೂರು, ಜ. 4- ಮುಪ್ಪಿನ ವಯಸ್ಸಲ್ಲಿ ಮೆಚ್ಚುಗೆಯ ಮಾತುಗಳನ್ನು ಕೇಳಿದಾಗ 39 ವರ್ಷಗಳ ಸೇವಾ ನಿಷ್ಠೆ ಬಗ್ಗೆ ಆನಂದ, ತೃಪ್ತಿ ತರುತ್ತದೆ ಎಂದು ಮುಖ್ಯ ಶಿಕ್ಷಕಿ ಎನ್.ಎಸ್.ಗೌರಮ್ಮ ಅಭಿಪ್ರಾಯಪಟ್ಟರು.

ಕುಂಬಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾಲ್ಲೂಕು ಶಿಕ್ಷಕರ ಸಂಘದಿಂದ ಹಮ್ಮಿಕೊಂಡಿದ್ದ ಹೃದಯಸ್ಪರ್ಶಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಶಿಕ್ಷಕರು ಮಕ್ಕಳ ಮತ್ತು ಪೋಷಕರ ಮನದಲ್ಲಿ ಉಳಿಯಬೇಕು. ಸಮಾಜದಲ್ಲಿನ ಗೌರವ ಮತ್ತು ವ್ಯರ್ಥ ಸಮಯ ಬಳಸಿಕೊಂಡು ಮಕ್ಕಳಿಗೆ ಕಲಿಕೆ ನೀಡಬೇಕು ಎಂದು ತಿಳಿಸಿದರು.



ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಚಂದ್ರಪ್ಪ ಮಾತನಾಡಿ, ಉಪಾಧ್ಯಾಯರು ವಯೋನಿವೃತ್ತಿ ಪಡೆಯುವ ದಿನವೇ ಅವರ ಶಾಲೆಗೆ ತೆರಳಿ ಸಂಘದಿಂದ ಗೌರವಿಸುವ ಹೊಸ ಆಲೋಚನೆ ಮಾಡಲಾಗಿದೆ ಎಂದರು.

ಶಿಕ್ಷಕ ಮಲ್ಲಿಕಾರ್ಜುನ್ ಅಂಗಡಿ ಮಾತನಾಡಿ, ವ್ಯಕ್ತಿಯ ವ್ಯಕ್ತಿತ್ವ, ನಡತೆ, ಚಟುವಟಿಕೆಗಳನ್ನು ಅನುಸರಿಸಿ ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳಲು ಸಕಾಲ ಎಂದರು.

ತಾಲ್ಲೂಕು ಕಸಾಪ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ಅವರು ವಯೋನಿವೃತ್ತಿ ಹೊಂದಿದ ಗೌರಮ್ಮ ಅವರನ್ನು ಸನ್ಮಾನಿಸಿ, ಗೌರವಿಸಿದರು. ಶಿ.ಸಂಘದ ಪ್ರಧಾನ ಕಾರ್ಯದರ್ಶಿ ಶರಣಕುಮಾರ್ ಹೆಗಡೆ, ಉಪಾಧ್ಯಕ್ಷೆ ಜ್ಯೋತಿ, ಖಜಾಂಚಿ ವಿನೋದ, ಮುದ್ದೇರ ಹನುಮಂತಪ್ಪ, ಮಹೇಶ್ವರಯ್ಯ, ತಿಪ್ಪೇಸ್ವಾಮಿ, ಖಲೀಲ್, ಬೀರಪ್ಪ, ನಾಗರಾಜ್, ಕರಿಬಸಪ್ಪ, ಪತ್ರಕರ್ತ ಸದಾನಂದ, ರುದ್ರಪ್ಪ, ಸುಧಾ ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಎಂ.ಹೆಚ್. ಶರಣ್ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ವ್ಯಾಪಾರ ಮಾಡಿ, ಮೋಸ ಬೇಡ

(1ನೇ ಪುಟದಿಂದ) ಕಮಿಟಿಯಲ್ಲಿ ಚರ್ಚಿಸಿ ಆಶ್ರಯ ಮನೆ ಕಟ್ಟಿಸಿಕೊಡುವ ವ್ಯವಸ್ಥೆ ಮಾಡುವುದಾಗಿ ಹೇಳಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಕೆ. ಅಬ್ದುಲ್ ಜಬ್ಬಾರ್, ಬೆಂಗಳೂರು, ಹುಬ್ಬಳ್ಳಿ ಹೊರತುಪಡಿಸಿದರೆ ರಾಜ್ಯದಲ್ಲಿಯೇ ದಾವಣಗೆರೆ ಎಪಿಎಂಸಿ ಉತ್ತಮ ಮಾರುಕಟ್ಟೆಯಾಗಿದೆ ಎಂದರು.

ಎಪಿಎಂಸಿ ಅಧ್ಯಕ್ಷ ಅಣಜಿ ಚಂದ್ರಶೇಖರ್ ಮಾತನಾಡುತ್ತಾ, ಮಾರುಕಟ್ಟೆ ನಿರ್ಮಾಣಕ್ಕೆ ಶ್ರಮಿಸಿದ ಎಸ್ಸೆಸ್ ಹಾಗೂ ಎಸ್ಸೆಸ್ಸೆಂ ಅವರ ಹೆಸರನ್ನು ಮಾರುಕಟ್ಟೆಗೆ ನಾಮಕರಣ ಮಾಡಬೇಕಾಗಿತ್ತು. ಮುಂದಾದರೂ ಈ ಬಗ್ಗೆ ಗಮನ ಹರಿಸಿ, ಉತ್ತಮವಾಗಿ ಕೆಲಸ ಮಾಡಿದವರನ್ನು ಗುರುತಿಸುವ ಕೆಲಸವಾಗಬೇಕಿದೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್, ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪರಿಶ್ರಮದಿಂದಲೇ 250 ಕೋಟಿ ರೂ. ಅನುದಾನದಲ್ಲಿ ಎಪಿಎಂಸಿ ಮಾರುಕಟ್ಟೆ ಸುಸಜ್ಜಿತವಾಗಿದೆ. ನೂತನ ಮಾರುಕಟ್ಟೆಯ ಪರಿಕಲ್ಪನೆ ಹುಟ್ಟಿದ್ದೇ ಎಸ್ಸೆಸ್ ಹಾಗೂ ಎಸ್ಸೆಸ್ಸೆಂ ಅವರಿಂದ.

ದಾವಣಗೆರೆ ಎಪಿಎಂಸಿಯಲ್ಲಿ ರಸ್ತೆ, ಒಣಗಿಸಲು ಪ್ರಾಂಗಣ ಸೇರಿದಂತೆ ಉತ್ತಮ ಸೌಲಭ್ಯಗಳಿರುವುದರಿಂದ ಹೆಚ್ಚಿನ ಮಟ್ಟದಲ್ಲಿ ದಾಸ್ತಾನು ಬರುತ್ತಿದೆ. ನಗರದ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸಿದ್ದ ಮಲ್ಲಿಕಾರ್ಜುನ್ ಅವರನ್ನು ಕಳೆದ ಚುನಾವಣೆಯಲ್ಲಿ ಜನತೆ ಕಡೆಗಣಿಸಿದ್ದು ದುರಂತ. ಮುಂದಾದರೂ ತಪ್ಪುಗಳನ್ನು ಸರಿಪಡಿಸಿಕೊಂಡು ಎಸ್ಸೆಸ್ಸೆಂ ಅವರೊಟ್ಟಿಗೆ ಅಭಿವೃದ್ಧಿಗೆ ಕೈ ಜೋಡಿಸಬೇಕಿದೆ ಎಂದರು.

ಹಣ್ಣು ಹಾಗೂ ಹೂವಿನ ಮಾರುಕಟ್ಟೆಗೆ ಬರುವ ಗ್ರಾಹಕರ ಅನುಕೂಲಕ್ಕಾಗಿ ಓಡಾಡಲು 10 ಅಡಿ ರಸ್ತೆಗೆ ಜಾಗದ ಅಗತ್ಯವಿದ್ದು, ಜೈವಿಕ ಪ್ರಯೋಗಾಲಯದವರು ಇದನ್ನು ಗಣನೆಗೆ ತೆಗೆದುಕೊಂಡು ಜಾಗ ಬಿಟ್ಟುಕೊಡಬೇಕಿದೆ ಎಂದರು.

ಸಗಟು ಹಣ್ಣಿನ ವರ್ತಕರ ಸಂಘದ ಅಧ್ಯಕ್ಷ ಅಬ್ದುಲ್ ರಹಮಾನ್ ಹೆಚ್.ಕೆ. ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ನಗರದಲ್ಲಿ ಎಲ್ಲಾ ವ್ಯಾಪಾರಸ್ಥರು ಮಾರುಕಟ್ಟೆಗೆ ತಮ್ಮ ವ್ಯಾಪಾರವನ್ನು ಸ್ಥಳಾಂತರಿಸುವ ಮೂಲಕ ಮಾರುಕಟ್ಟೆ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಬಿ.ಆನಂದ್, ಜೆಡಿಎಸ್ ಮುಖಂಡ ಜೆ.ಅಮಾನುಲ್ಲಾ ಖಾನ್ ಮಾತನಾಡಿದರು. ಸಂಘದ ಕಾರ್ಯದರ್ಶಿ ಕೆ.ಹನೀಫ್ ಸಾಬ್ ಸ್ವಾಗತಿಸಿದರು. ಶಾಂತಲಾ ಪ್ರಾರ್ಥಿಸಿ, ನಿರೂಪಿಸಿದರು. ವಕ್ಫ್ ಅಧ್ಯಕ್ಷ ಸಿರಾಜ್ ಅಹ್ಮದ್, ಡಿ.ಈರಣ್ಣ, ಕೆ.ಜಿ. ಶಾಂತರಾಜ್, ರಾಜಣ್ಣ, ದೊಗ್ಗಳ್ಳಿ ಬಸವರಾಜ್ ಇತರರು ಉಪಸ್ಥಿತರಿದ್ದರು.

# ಗುಂಪು ಘರ್ಷಣೆ : ಓರ್ವನ ಸಾವು



(1ನೇ ಪುಟದಿಂದ) ಮಾತಿನ ಚಕಮಕಿ ನಡೆದು ಘರ್ಷಣೆಗೆ ತಿರುಗಿ ಎರಡೂ ಗುಂಪಿನವರು ಕಲ್ಲು, ದೊಣ್ಣೆಗಳನ್ನು ಬಳಸಿ ಹೊಡೆದಾಡಿದ್ದಾರೆ.

ಜಗಳದಲ್ಲಿ ವಿಜೇತ ಅಭ್ಯರ್ಥಿ ತಿಪ್ಪಮ್ಮ ಸಂಬಂಧಿಕರಾದ ನಿವೃತ್ತ ಶಿಕ್ಷಕ ಕೃಷ್ಣಪ್ಪ ಮತ್ತು ವೀರೇಂದ್ರ ಅವರಿಗೆ ಬಲವಾದ ಪೆಟ್ಟು ಬಿದ್ದು ತಕ್ಷಣವೇ ಆಸ್ಪತ್ರೆಗೆ ಸಾಗಿಸಿದರೂ ಕೃಷ್ಣಪ್ಪ ಬದುಕುಳಿಯಲಿಲ್ಲ. ಗ್ರಾಮದಲ್ಲಿ ಬಿಗುವಿನ ವಾತಾವರಣ ಇದ್ದು ಪೊಲೀಸರು ಸ್ಥಳದಲ್ಲೇ ಬೀಡು ಬಿಟ್ಟಿದ್ದಾರೆ.

ಹೆಚ್ಚುವರಿ ಪೊಲೀಸ್ ಇಲಾಖೆ ಅಧೀಕ್ಷಕ ಎಂ. ರಾಜೀವ್ ಭೇಟಿ ನೀಡಿ, ಯಾರೇ ತಪ್ಪಿತಸ್ಥರಿರಲಿ ಕಾನೂನು ಚೌಕಟ್ಟಿನಡಿ ಕ್ರಮ ಕೈಗೊಳ್ಳಲಾಗುವುದು. ಗ್ರಾಮದಲ್ಲಿ ಶಾಂತಿ ಕಾಪಾಡಿರಿ. ಜಾಗೃತರಾಗಿರಿ ಎಂದು ಗ್ರಾಮಸ್ಥರಿಗೆ ಕರೆ ನೀಡಿದರು.

ದಾವಣಗೆರೆ ಗ್ರಾಮಾಂತರ ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ್ , ಜಗಳೂರು ಪೊಲೀಸ್ ವೃತ್ತ ನಿರೀಕ್ಷಕ ಡಿ . ದುರುಗಪ್ಪ ಸೂಕ್ತ ಬಂದೋಬಸ್ತ್ ಕೈಗೊಂಡಿದ್ದಾರೆ. ಬಿಳಿಚೋಡು ಠಾಣೆಯಲ್ಲಿ ಎಂಟು ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು, ಪೋಲಿಸರು ತನಿಖೆ ಕೈಗೊಂಡಿದ್ದಾರೆ.

# ಬಿಸಿಯೂಟ ತಯಾರಕರ ಪ್ರತಿಭಟನೆ

(1ನೇ ಪುಟದಿಂದ) ಶಾಲಾ ಸಿಬ್ಬಂದಿ ಯನ್ನಾಗಿ ಪರಿವರ್ತಿಸಬೇಕು ಎಂದು ಆಗ್ರಹಿಸಿದರು. ಅಡುಗೆ ಸಿಬ್ಬಂದಿಯವರ ಸಂಖ್ಯೆಯನ್ನು ಮೂಲ ಕೈಪಿಡಿಯಲ್ಲಿರುವಂತೆ ಪುನಃ ನಿಗದಿಪಡಿಸಬೇಕು. ಬೇಸಿಗೆ ರಜೆ ಹಾಗೂ ದಸರಾ ರಜೆ ಜಾರಿಗೊಳಿಸಬೇಕು. ಪ್ರತಿ ತಿಂಗಳು 5ನೇ ತಾರೀಖಿನಂದು ಸಂಬಳ ಕೊಡಬೇಕು. 60 ವರ್ಷ ವಯಸ್ಸಾದ ಬಿಸಿಯೂಟ ತಯಾ ರಕರಿಗೆ ಮಾಸಿಕ 5 ಸಾವಿರ ನಿವೃತ್ತಿ ಪಿಂಚಣಿ ಕೊಡಬೇಕು ಮತ್ತು 2 ಲಕ್ಷ ರೂ. ಇಡುಗಂಟು ಹಣ ಕೊಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ರಾಜ್ಯ ಗೌರವಾಧ್ಯಕ್ಷ ಹೆಚ್.ಕೆ. ರಾಮಚಂದ್ರಪ್ಪ, ರಾಜ್ಯ ಖಜಾಂಚಿ ಬೆಳಗೆರೆ ರುದ್ರಮ್ಮ, ಜಿಲ್ಲಾ ಉಪಾಧ್ಯಕ್ಷೆ ಜ್ಯೋತಿ ಲಕ್ಷ್ಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು, ಜಿಲ್ಲಾ ಸಂಚಾಲಕ ಗದಿಗೇಶ್ ಪಾಳೇದ, ಆವರಗೆರೆ ವಾಸು, ಸತೀಶ್ ಅರವಿಂದ್, ಮಳಲ್ಕೆರೆ ಜಯಮ್ಮ, ಸಿ. ರಮೇಶ, ಲಲಿತಮ್ಮ, ಜಯಮ್ಮ, ಮಂಗಳಗೌರಿ, ಅನ್ನಪೂರ್ಣ, ಸರೋಜ, ರಾಧಮ್ಮ, ವನಜಾಕ್ಷಮ್ಮ, ಅರುಣ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಕಾಯ್ದೆಗಳ ಅಂಶಗಳ ಚರ್ಚೆಗೆ ನಕಾರ

(1ನೇ ಪುಟದಿಂದ) ಆಶಾಭಾವನೆ ವ್ಯಕ್ತಪಡಿಸಿದ್ದಾರೆ. ಆದರೆ, ಪರಿಹಾರ ಕಂಡುಕೊಳ್ಳಲು ಎರಡೂ ಕಡೆಯವರು ಪ್ರಯತ್ನಿಸಬೇಕು ಎಂದಿದ್ದಾರೆ.

ಸರ್ಕಾರ ಕಾಯ್ದೆಯ ಪ್ರತಿಯೊಂದು ಅಂಶವನ್ನು ಚರ್ಚಿಸಿ ಮುಂದುವರೆಯಬೇಕೆಂದು ಬಯಸಿತ್ತು. ಆದರೆ, ರೈತ ಮುಖಂಡರು ಕಾಯ್ದೆಗಳನ್ನು ವಾಪಸ್ ಪಡೆಯಬೇಕೆಂದು ಪಟ್ಟು ಹಿಡಿದರು. ಹೀಗಾಗಿ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಲಿಲ್ಲ ಎಂದಿದ್ದಾರೆ.

ಮತ್ತೊಂದೆಡೆ ಹೇಳಿಕೆ ನೀಡಿರುವ ರೈತ ಮುಖಂಡರು, ಸರ್ಕಾರದ ಅಹಂಕಾರಿ ವರ್ತನೆಯ ಕಾರಣದಿಂದಾಗಿ ಮಾತುಕತೆ ಫಲ ನೀಡಿಲ್ಲ ಎಂದಿದ್ದಾರೆ. ಮೂರು ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಹಾಗೂ ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಗ್ಯಾರಂಟಿ ನೀಡಬೇಕು ಎಂದು ಪಟ್ಟು ಹಿಡಿಯುವುದಾಗಿ ಮುಖಂಡರು ಹೇಳಿದ್ದಾರೆ.

ಆರಂಭದಿಂದಲೇ ರೈತ ಮುಖಂಡರು ತಮ್ಮ ಬೇಡಿಕೆಗಳಿಗೆ ಪಟ್ಟು ಹಿಡಿದರು. ಒಂದು ಗಂಟೆಯ ನಂತರ ಬಿಡುವು ಪಡೆಯಲಾಯಿತು. ಈ ಬಾರಿಯೂ ರೈತರು ಸಾಮೂಹಿಕ ಅಡುಗೆ ಮನೆಯಿಂದ ಆಹಾರ ತರಿಸಿದ್ದರು. ಆದರೆ, ಕಳೆದ ಬಾರಿಯಂತೆ ಸಚಿವರು ರೈತರ ಜೊತೆ ಆಹಾರ ಸೇವನೆಗೆ ಮುಂದಾಗಲಿಲ್ಲ.

ನಂತರ ಇನ್ನೊಂದು ಸುತ್ತಿನ ಮಾತುಕತೆ ನಡೆಸಲಾಯಿತಾದರೂ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಲಿಲ್ಲ.

# ಗುತ್ತಿಗೆ ಕೃಷಿಗೆ ಹೋಗಲ್ಲ ; ರಿಲೈಯನ್ಸ್

(1ನೇ ಪುಟದಿಂದ) ಪ್ರಮುಖ ಸಂಪರ್ಕ ಮೂಲ ಭೂತ ಸೌಲಭ್ಯಕ್ಕೆ ಹಾನಿಯಾಗಿದೆ. ರಿಲೈಯನ್ಸ್ ಅಂಗಸಂಸ್ಥೆಗಳ ಮಾರಾಟ ಹಾಗೂ ಸೇವೆಗಳಿಗೆ ಹಾನಿಯಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ರಿಲೈಯನ್ಸ್ ಅಂಗ ಸಂಸ್ಥೆಯಾದ ರಿಲೈಯನ್ಸ್ ರಿಟೇಲ್ ಎಂದೂ ರೈತರ ಜೊತೆ ದೀರ್ಘಾವಧಿ ಒಪ್ಪಂದದ ಮೂಲಕ ಅನಗತ್ಯ ಲಾಭ ಪಡೆಯಲು ಇಲ್ಲವೇ ಕಡಿಮೆ ಬೆಲೆಗೆ ಸರಕುಗಳನ್ನು ಖರೀದಿಸಲು ಮುಂದಾಗಿಲ್ಲ. ಅಂತಹ ಕ್ರಮಕ್ಕೆ ಮುಂದಾಗುವುದೂ ಇಲ್ಲ ಎಂದು ತಿಳಿಸಲಾಗಿದೆ.

ರಿಲೈಯನ್ಸ್ ರಿಟೇಲ್ ದೇಶದಲ್ಲೇ ಅತಿ ದೊಡ್ಡ ಸಂಘಟಿತ ಚಿಲ್ಲರೆ ವಹಿವಾಟು ಜಾಲವನ್ನು ಬೆಳೆಸಿದೆ. ಇದರಿಂದಾಗಿ ವಿಶ್ವ ದರ್ಜೆಯ ಪೂರೈಕೆ ಜಾಲ ರೂಪುಗೊಂಡಿದೆ. ಇದರಿಂದ ಭಾರತೀಯ ರೈತರು ಹಾಗೂ ಗ್ರಾಹಕರಿಗೆ ಗಮನಾರ್ಹ ಲಾಭವಾಗಿದೆ ಎಂದು ಕಂಪನಿ ತಿಳಿಸಿದೆ.

ನಮ್ಮ ಪೂರೈಕೆದಾರರು ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆಯನ್ನು ಪಾಲಿಸುವಂತೆ ತಾಕೀತು ಮಾಡಿದ್ದೇವೆ. ಸರ್ಕಾರ ನಿಗದಿ ಪಡಿಸಿರುವ ಬೆಲೆಗಳನ್ನು ಪಾಲಿಸುತ್ತೇವೆ ಎಂದೂ ಕಂಪನಿ ಹೇಳಿದೆ.


**Wanted Teachers**
(Part time or Full Time)
No of posts :
*1) B.Sc B.Ed(CBZ):-01*
*2) B.Sc B.Ed(PCM):-01*
NISARGA CONVENT & HIGH SCHOOL
SOG Badavane , Davangere.
Contact us:
99862 26454 98444 43374

**ಬೇಕಾಗಿದ್ದಾರೆ**
ನಂದಿ ಟೈರ್ ಪ್ಲಾನೆಟ್
Wheel Alignment ಮಾಡಲು ಹುಡುಗರು ಬೇಕಾಗಿದ್ದಾರೆ.
Salary : Rs. 10,000/-
Mob. : 95381 87385
Landline : 08192-261003
Mob. : 99161 43003

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**ಬೇಕಾಗಿದ್ದಾರೆ**
Old Age Care Centre ನಲ್ಲಿ ಹಗಲು-ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ.
ಮೊ. 89711 92936

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ**
ಸಂಬಳ 10,000/- ದಿಂದ 15,000/-
ಫೋ. 08192-231951
231953


# ಮಾಜಿ ಶಾಸಕ ಶಾಂತನಗೌಡ ಅವರಿಂದ ರಾಮ ಮಂದಿರ ನಿರ್ಮಾಣಕ್ಕೆ ಸಹಾಯ



ಹೊನ್ನಾಳಿ, ಜ.4 - ಮಾಜಿ ಶಾಸಕ ಡಿ.ಜಿ. ಶಾಂತನಗೌಡರು ಅಯೋಧ್ಯೆಯ ಶ್ರೀ ರಾಮ ಮಂದಿರ ನಿರ್ಮಾಣಕ್ಕೆ ಉಮಾಕಾಂತ್ ಜೋಯಿಸ್ ಅವರಿಗೆ ಸೋಮವಾರ 25 ಸಾವಿರ ರೂ.ಗಳ ಚೆಕ್ ನೀಡಿದರು. ಮುಖಂಡರಾದ ಪ್ರಹ್ಲಾದ್‌ರಾವ್, ಶ್ರೀನಿವಾಸಮೂರ್ತಿ, ಎಚ್.ಎಂ. ಅರುಣ್‌ಕುಮಾರ್, ಡಾ. ಜಿತೇಂದ್ರ ಬಿಸಾಟಿ, ನೆಲಹೊನ್ನೆ ಎನ್.ಎಸ್. ಮಂಜುನಾಥ್ ಉಪಸ್ಥಿತರಿದ್ದರು.

# ಹದಡಿಯಲ್ಲಿ ಇಂದು ಬೀರಲಿಂಗೇಶ್ವರ ದೇವರ ಕೆಂಡದಾರ್ಚನೆ

ದಾವಣಗೆರೆ ತಾಲ್ಲೂಕು ಹದಡಿ ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಬೀರಲಿಂಗೇಶ್ವರ ಕಾರ್ತಿಕೋತ್ಸವದ ಅಂಗವಾಗಿ ಇಂದು ದೇವರುಗಳಿಗೆ ಹೊಳೆ ಪೂಜೆ ನಡೆಯುವುದು. ನಂತರ ಮುಳ್ಳು ಗದ್ದಿಗೆಯಿಂದ ಶ್ರೀ ಬೀರದೇವರು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಕೆಂಡದ ಗದ್ದುಗೆಗೆ ಹೋಗಿ ಸಂಜೆ 5.30 ಕ್ಕೆ ಕೆಂಡದಾರ್ಚನೆ ನಡೆಯಲಿದೆ ಹಾಗೂ ಮುಳ್ಳು ಗದ್ದಿಗೆಯ ಮೇಲೆ ಸ್ವಾಮಿಯ ಪ್ರದರ್ಶನವಾಗುವುದು.

# ಲಸಿಕೆಗೆ ರಾಜ್ಯದಲ್ಲಿ 29 ಸಾವಿರ ಕೇಂದ್ರ

(1ನೇ ಪುಟದಿಂದ) ಕನ್ನಡ, ಕೊಡಗು, ಚಿಕ್ಕಬಳ್ಳಾಪುರ, ಹಾವೇರಿ, ಧಾರವಾಡ ಸೇರಿದಂತೆ ರಾಜ್ಯದ ಬಹುತೇಕ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಕೋವಿಡ್ ಲಸಿಕೆ ದಾಸ್ತಾನಿಗೆ ಜಿಲ್ಲಾಡಳಿತ ಅಗತ್ಯ ಕ್ರಮಗಳನ್ನು ಕೈಗೊಂಡಿದೆ.

# ಹರಿಹರದಲ್ಲಿ ವಿದ್ಯುತ್ ಸ್ಪರ್ಶಿ ವ್ಯಕ್ತಿ ಸಾವು



ಹರಿಹರ, ಜ.4- ನಗರದ ನಡವಲಪೇಟೆ ಬಡಾವಣೆಯ ಶಂಭುಲಿಂಗಪ್ಪ ತಂದೆ ಬಸವರಾಜ್ (38) ಎಂಬಾತ ಬೆಳಿಗ್ಗೆ 8 ಗಂಟೆಯ ಸಮಯದಲ್ಲಿ ಮನೆಯ ಮುಂದಿನ ನೀರಿನ ಮೋಟರ್‌ಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಸಲುವಾಗಿ ಮೋಟರ್ ನ ಸ್ವಿಚ್ ಮತ್ತು ಪ್ಲಗ್‌ಗೆ ಸಿಕ್ಕಿಸಿದ ವೈರ್‌ನ ಸ್ವಿಚ್ಚನ್ನು ಸಂಪರ್ಕಿಸುವ ವೇಳೆ ಆಕಸ್ಮಿಕವಾಗಿ ವಿದ್ಯುತ್ ತಗುಲಿ ಮೃತಪಟ್ಟಿದ್ದಾರೆ. ಮೃತ ವ್ಯಕ್ತಿಯು ದಾವಣಗೆರೆ ಶಶಿ ಸೋಪ್ ಕಂಪನಿಯಲ್ಲಿ ಉದ್ಯೋಗ ಮಾಡುತ್ತಿದ್ದರು ಎನ್ನಲಾಗಿದೆ. ಮೃತರ ಮನೆಗೆ ನಗರ ಠಾಣೆಯ ಪಿಎಸ್‌ಐ ಸುನೀಲ್ ಬಸವರಾಜ್ ತೆಲಿ ಭೇಟಿ ನೀಡಿದ್ದರು.

## ಹಳ್ಳಿಹಾಳ್ ಗ್ರಾಮದ ಹುಲ್ಲುಮನಿ ಹಾಲನಗೌಡ ನಿಧನ



ಹರಿಹರ ತಾ. ಹಳ್ಳಿಹಾಳ್ ಗ್ರಾಮದ ಮುಖಂಡರೂ, ಶ್ರೀ ನಂದಿ ಸೌಹಾರ್ದ ಸಹಕಾರಿ ನಿರ್ದೇಶಕರೂ ಆದ ಹೆಚ್. ವೀರನಗೌಡ ಇವರ ಸಹೋದರರಾದ

**ಶ್ರೀ ಹುಲ್ಲುಮನಿ ಹಾಲನಗೌಡ (ಹಾಲೇಶ್)**

ಅವರು ದಿನಾಂಕ 4.01.2021 ರ ಸೋಮವಾರ ಸಾಯಂಕಾಲ 4.30ಕ್ಕೆ ನಿಧನರಾದರು, ಮೃತರಿಗೆ 46 ವರ್ಷ ವಯಸ್ಸಾಗಿತ್ತು. ತಾಯಿ, ಸಹೋದರ, ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 05.01.2021 ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಹಳ್ಳಿಹಾಳ್ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತರು : **ಹುಲ್ಲುಮನಿ ವಂಶಸ್ಥರು ಹಾಗೂ ಬಂಧು-ಮಿತ್ರರು.**

॥ ನಂದಿತಾವರೆ ಶ್ರೀ ಬಸವೇಶ್ವರ ಪ್ರಸನ್ನ ॥ ॥ ಜಿಗಳಿ ಶ್ರೀ ರಂಗನಾಥಸ್ವಾಮಿ ಪ್ರಸನ್ನ ॥ ॥ ಹೊನ್ನಮರಡಿ ಶ್ರೀ ಕರಿಯಮ್ಮ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ



ಆತ್ಮೀಯರೇ, ನನ್ನ ಪೂಜ್ಯ ಪತಿಯವರಾದ

**ಶ್ರೀ ಪುಟ್ಟಣ್ಣರ ಶೇಖರಪ್ಪ**

ಮಾಜಿ ಅಧ್ಯಕ್ಷರು, ಹಾಲು ಉತ್ಪಾದಕರ ಸಹಕಾರ ಸಂಘ, ಜಿಗಳಿ. ಧರ್ಮದರ್ಶಿಗಳು, ಶ್ರೀ ರಂಗನಾಥ ಸ್ವಾಮಿ ದೇವಸ್ಥಾನ ಸಮಿತಿ, ಜಿಗಳಿ. ಇವರು ದಿನಾಂಕ : 24.12.2020ನೇ ಗುರುವಾರ ರಾತ್ರಿ 8.50ಕ್ಕೆ ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ: 5.10.2021ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಹರಿಹರ ತಾಲ್ಲೂಕು ಜಿಗಳಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುವ....

ಇಂತಿ ದುಃಖ ತಪ್ತರು : ಮೃತರ ಪತ್ನಿ : ಶ್ರೀಮತಿ ನಾಗಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಶ್ರೀಮತಿ ಗಂಗಮ್ಮ, ದಿ॥ ದಾಸರ ಕರಿಯಪ್ಪ, ಶ್ರೀಮತಿ ರತ್ನಮ್ಮ ದಿ॥ ನಲ್ಲೂರು ಲಕ್ಷ್ಮಣ, ಶ್ರೀಮತಿ ನೀಲಮ್ಮ ಶ್ರೀ ದೀವಿಗಿಹಳ್ಳಿ ಚಂದ್ರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಶ್ರೀಮತಿ ಶಾಂತಮ್ಮ ಶ್ರೀ ಪುಟ್ಟಣ್ಣರ ಬಸವರಾಜ್ ಮತ್ತು ಪುಟ್ಟಣ್ಣರ ವಂಶಸ್ಥರು ಹಾಗೂ ಜಿಗಳಿ ಗ್ರಾಮಸ್ಥರು, ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ನಗರ ಹಳೇಕುಂದವಾಡ ಗ್ರಾಮದ ವಾಸಿಗಳಾದ ಶ್ರೀಮತಿ ಲಿಂ॥ ದೇವೀರಮ್ಮ ಶ್ರೀ ಲಿಂ॥ ಶಾಂತಪ್ಪ ಇವರ ಮಗನಾದ ದಿ॥ಶ್ರೀ ಎನ್. ಎಸ್. ಪರಮೇಶ್ವರಪ್ಪನವರ ಮಗನಾದ ಶ್ರೀ ಎನ್ ಪಿ. ವಾಮದೇವ ಇವರು ಮಾಡುವ ವಿಜ್ಞಾನಪನೆಗಳು.

ಶರಣು ಬಂಧುಗಳೇ,

ದಿನಾಂಕ 28.12.2020ನೇ ಸೋಮವಾರ ರಾತ್ರಿ 10.05ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಚನ್ನಬಸಮ್ಮನವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 05.01.2021ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ ನಿವೃತ್ತ ನೌಕರರ ಭವನ ಎಂ.ಸಿ.ಸಿ. 'ಬಿ' ಬ್ಲಾಕ್ 12ನೇ ಮೇನ್, ಬಾಪೂಜಿ ಸ್ಕೂಲ್ ಹತ್ತಿರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

*ಇಂತಿ ದುಃಖತಪ್ತರು:*

ಶ್ರೀಮತಿ ಸುನೀತ ಶ್ರೀ ವಾಮದೇವ ಮತ್ತು ಮಕ್ಕಳು,
ಶ್ರೀಮತಿ ಮಂಜುಳ ಶ್ರೀ ಲೋಕನಗೌಡ್ರು ಮತ್ತು ಮಕ್ಕಳು, ಮುದೇನೂರು.
ಶ್ರೀಮತಿ ಪಾರ್ವತಮ್ಮ ಶ್ರೀ ಕುಬೇರಪ್ಪ ಮತ್ತು ಮಕ್ಕಳು, ಶ್ಯಾಗಲೆ.
ನಿಟುವಳ್ಳಿ ವಂಶಸ್ಥರು ಮತ್ತು ಹಳೇ ಕುಂದವಾಡ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
ಮೊ: 98441 27799

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

## ಚೀಳಂಗಿ ಮಠದ ಸರ್ವಮಂಗಳಮ್ಮ ನಿಧನ



ದಾವಣಗೆರೆ ಕಾಯಿಪೇಟೆ (ಸ್ವಾಗೇರ ಪೇಟೆ) ವಾಸಿ ದಿ. ಚೀಳಂಗಿ ಮಠದ ವಿರೂಪಾಕ್ಷಯ್ಯನವರ ಧರ್ಮಪತ್ನಿ

**ಶ್ರೀಮತಿ ಚೀಳಂಗಿ ಮಠದ ಸರ್ವಮಂಗಳಮ್ಮ** (78)

ಅವರು ದಿನಾಂಕ 4.01.2021 ರಂದು ಸೋಮವಾರ ಸಂಜೆ 4.30ಕ್ಕೆ ನಿಧನರಾಗಿದ್ದಾರೆ. ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.01.2021 ರಂದು ಮಂಗಳವಾರ ಬೆಳಿಗ್ಗೆ 9 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು :

**ಚೀಳಂಗಿ ಮಠದ ವಂಶಸ್ಥರು ಮೊ: 81473 07611**

## ನಗರದಲ್ಲಿ ಇಂದು ಕೊರೊನಾ ವಾರಿಯರ್ಸ್‌ಗೆ ಸನ್ಮಾನ

ದಾವಣಗೆರೆ, ಜ.4- ನಾಳೆ ದಿನಾಂಕ 5ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಕೊರೊನಾ ವಾರಿಯರ್ಸ್ ಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಯೋಗ ಒಕ್ಕೂಟದ ಕಾರ್ಯದರ್ಶಿ ವಾಸುದೇವ್ ರಾಯ್ಕರ್ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪ್ರೇರಣಾ ಸಾಂಸ್ಕೃತಿಕ ಸಂಸ್ಥೆ, ಜಿಲ್ಲಾ ಯೋಗ ಒಕ್ಕೂಟ, ಹಿಮಾಲಯನ್ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿ ಆಶ್ರಯದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ 190 ಜನರನ್ನು ಸನ್ಮಾನಿಸಲಾಗುವುದು ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಜಿ.ಎಂ. ಸಿದ್ದೇಶ್ವರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚೇತನಾ ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಎಸ್.ಎ. ರವೀಂದ್ರನಾಥ್, ಎಸ್. ವಿ. ರಾಮಚಂದ್ರಪ್ಪ, ಮಹಾಂತೇಶ ಬೀಳಗಿ, ಹನುಮಂತರಾಯ, ಪದ್ಮ ಬಸವಂತಪ್ಪ, ಬಿ.ಜಿ. ಅಜಯ್ ಕುಮಾರ್ ಭಾಗವಹಿಸುವರು.

ಪತ್ರಿಕಾಗೋಷ್ಠಿಯಲ್ಲಿ ಚೇತನಾ ಶಿವಕುಮಾರ್, ಎನ್.ಕೆ. ಕೊಟ್ರೇಶ್, ಡಾ. ಸಿದ್ದೇಶಿ, ಪ್ರಕಾಶ್ ಉತ್ತಂಗಿ, ಜಯಣ್ಣ ಬಾದಾಮಿ ಇದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕುವೆಂಪು ನಗರ 5, 6 ಮತ್ತು 7ನೇ ಕ್ರಾಸ್, ಬೂಸ್ನೂರ್ ಪ್ರಿಂಟರ್ಸ್ ಸುತ್ತಮುತ್ತ, ಪವನ್ ಬಾರ್ ಅಂಡ್ ವುಡನ್ ಕಲ್ಚರ್ ಶಾಪ್ ಸುತ್ತಮುತ್ತ ಹಾಗೂ ಚನ್ನಬಸಪ್ಪನವರ ನಿವಾಸದ ಸುತ್ತಮುತ್ತ ಹಾಗೂ ಜಯನಗರ ಎ, ಬಿ ಮತ್ತು ಸಿ ಬ್ಲಾಕ್, ಭಗೀರಥ ಸರ್ಕಲ್, ಜಯನಗರ ಚರ್ಚ್ ಹಾಗು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ನಗರದಲ್ಲಿ ಪದೇ ಪದೇ ರಸ್ತೆ ಅಗಿತಕ್ಕೆ ಖಂಡನೆ




ದಾವಣಗೆರೆ, ಜ.4- ಎಲ್ಲೆಂದರಲ್ಲಿ ಗುಂಡಿ ಅಗೆಯುತ್ತಿರುವುದನ್ನು ಖಂಡಿಸಿ ಕರ್ನಾಟಕ ಯುವ ಶಕ್ತಿ ವೇದಿಕೆ ವತಿಯಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಅಂಬೇಡ್ಕರ್ ವೃತ್ತದಲ್ಲಿ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಜಿ. ಮಲ್ಲೇಶ್ ನೇತೃತ್ವದಲ್ಲಿ ಜಮಾಯಿಸಿದ್ದ ಕಾರ್ಯಕರ್ತರು, ಪ್ರತಿಭಟನಾ ಮೆರವಣಿಗೆ ಮುಖೇನ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ಮುಖಾಂತರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಇತ್ತೀಚಿನ ದಿನಗಳಲ್ಲಿ ನಗರದಲ್ಲಿ ಎಲ್ಲೆಂದರಲ್ಲಿ ಪದೇ ಪದೇ ಗುಂಡಿಗಳನ್ನು ತೆಗೆಯುತ್ತಿರುವುದು ಮತ್ತು ತೆಗೆದಿರುವ ಗುಂಡಿಗಳನ್ನು ಮುಚ್ಚಿ ಮತ್ತೆ ತೆಗೆಯುತ್ತಿರುವುದು ಸರಿಯಲ್ಲ. ಹೀಗೆ ಒಂದೇ ಕಾಮಗಾರಿಯನ್ನು ಪದೇ ಪದೇ ಮಾಡುವುದರಿಂದ ಸರ್ಕಾರ ಅಂದರೆ ಜನ ಸಾಮಾನ್ಯರ ಹಣ ವ್ಯಯವಾಗುವುದಲ್ಲದೆ ವಾಹನ ಚಾಲಕರಿಗೆ ತೊಂದರೆಯಾಗುತ್ತದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಸುಮಾರು ವರ್ಷಗಳಿಂದ ಮಾಡಿದ ಕಾಮಗಾರಿಯನ್ನೇ ಪುನಃ ಮಾಡುವುದರಿಂದ ಸಾಮಾನ್ಯ ಜನರಿಗೆ ಎಷ್ಟು ತೊಂದರೆ ಮತ್ತು ಈ ಕಾಮಗಾರಿಯನ್ನು ಮತ್ತೆ ಮಾಡಲು ಹಣ ಎಷ್ಟು ಬೇಕು?, ನಿಮ್ಮ ಸ್ವಂತ ಹಣವಾದರೆ ಈ ರೀತಿ ಮಾಡುತ್ತಿದ್ದೀರಾ. ಈ ಕೊರೊನಾದಂತಹ ಕಠಿಣ ಪರಿಸ್ಥಿತಿಯಲ್ಲಿ ಬಡ ಜನರು ಒಂದೊತ್ತಿನ ಊಟಕ್ಕೆ ಪರದಾಡುತ್ತಿದ್ದಾರೆ.

ಒಮ್ಮೆ ಜಲಸಿರಿ ಯೋಜನೆಯಡಿ ಅಗೆದರೆ, ಇನ್ನೊಮ್ಮೆ ಬೆಸ್ಕಾಂ ಯೋಜನೆಯಡಿ ಅಗೆಯುವುದು, ಮತ್ತೊಮ್ಮೆ ದೂರವಾಣಿ, ಗ್ಯಾಸ್ ಸರಬರಾಜು ಯೋಜನೆಯಡಿಯಲ್ಲಿ ಅಗೆಯುತ್ತಾ ಹೋದರೆ ಸಂಚಾರ ಸಮಸ್ಯೆ, ಸರ್ಕಾರದ ಹಣ ಎಷ್ಟು ವ್ಯಯವಾಗಲಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಇಲಾಖೆಯ ಅಧಿಕಾರಿಗಳು ಒಟ್ಟಾಗಿ ಸೇರಿಕೊಂಡು ಒಂದು ಯೋಜನೆ ತಯಾರಿಸಿ ಕಾಮಗಾರಿಗೆ ಮುಂದಾಗಬೇಕು. ಜನರಿಗೆ, ಸಣ್ಣ ಪುಟ್ಟ ಅಂಗಡಿಯವರಿಗೆ, ವರ್ತಕರಿಗೆ ತೊಂದರೆ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಆಕ್ಷೇಪಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ವಿ.ಕೆ. ರವಿ, ತಾಲ್ಲೂಕು ಅಧ್ಯಕ್ಷ ಕೆ. ಪರಶುರಾಮ್, ಸಂಪತ್ ಕುಮಾರ್, ಯೋಗೇಶ್, ವೆಂಕಟೇಶ್, ಮನೋಜ್, ಶಿವರಾಜ್, ಮುಬಾರಕ್, ಕೊಟ್ರೇಶ್, ಮುರುಗೇಶ್, ಸಿದ್ದೇಶ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಪೋದಾರ್ ಶಾಲೆಯಲ್ಲಿ ವರ್ಷಾಚರಣೆ



ದಾವಣಗೆರೆ, ಜ.4- ನಗರದ ಪೋದಾರ್ ಇಂಟರ್‌ನ್ಯಾಷನಲ್ ಹಾಗೂ ಪೋದಾರ್ ಜಂಬೋ ಕಿಡ್ಸ್ ವತಿಯಿಂದ ಹೊಸ ವರ್ಷದ ಆಚರಣೆಯನ್ನು ಶಾಲೆಯ ಪ್ರಾಂಶುಪಾಲ ರಮೇಶ್ ಚಂದ್ರ ಪಾಡ್ ಹಾಗೂ ಮುಖ್ಯೋಪಾಧ್ಯಾಯರಾದ ಮೊನಾಲಿಸ ಸಿಂಗ್ ಅವರುಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಶಿಕ್ಷಕಿಯರಾದ ಶ್ರೀಮತಿ ಮಂಗಳ ಮಲ್ಲಿಕಾರ್ಜುನ್, ಶ್ರೀಮತಿ ಅನಿಕ್ಷಿತಾ ಶಿವಕುಮಾರ್, ಶ್ರೀಮತಿ ಕವಿತಾ ಉಪಸ್ಥಿತರಿದ್ದರು. ಆಡಳಿತ ವರ್ಗದ ಸಾವನ್ ಹಾಗೂ ಶೃತಿ, ದೀಪ್ತಿ ಉಪಸ್ಥಿತರಿದ್ದರು.

## ನಗರದಲ್ಲಿಂದು ಬನ್ನಿಮಹಾಂಕಾಳಿ ಕಾರ್ತಿಕ

ಸ್ವಾಮಿ ವಿವೇಕಾನಂದ ಬಡಾವಣೆಯ ಶ್ರೀ ವಿಶ್ವಶಕ್ತಿ ಬನ್ನಿಮಹಾಂಕಾಳಿ ದೇವಿಯ 16ನೇ ವರ್ಷದ ಕಾರ್ತಿಕೋತ್ಸವ ಇಂದು ಸಂಜೆ 5 ಗಂಟೆಗೆ ನಡೆಯಲಿದೆ. ಪ್ರಾತಃಕಾಲ 5 ಗಂಟೆಗೆ ಶ್ರೀ ಗಣಪತಿ ಪೂಜಾ, ನಂದಿ ಪೂಜೆ, ನವಗ್ರಹ ಪೂಜಾ, ಪಂಚೆ ಬ್ರಾಹ್ಮಣ ಪೂಜಾ ಹಾಗು ಶ್ರೀ ದುರ್ಗಾ ಹೋಮ, ಶ್ರೀ ಕಾಳಿಕಾದೇವಿ ಹೋಮ ನಡೆಯುವುದು. ಸಂಜೆ 6.50 ಕ್ಕೆ ಕಾರ್ತಿಕೋತ್ಸವ, ದೀಪಾರಾಧನೆ ಹಾಗೂ ಫಳಾರ ಕಾರ್ಯಕ್ರಮ ಜರುಗುವುದು.

# ನಾಳಿನ ಕುರುಬರ ಜಾಗೃತಿ ಸಮಾವೇಶಕ್ಕೆ 25 ಸಾವಿರ ಜನ

**(1ನೇ ಪುಟದಿಂದ)** ಎಸ್‌ಟಿ ಹೋರಾಟ ಸಮಿತಿ ರಾಜ್ಯ ಉಪಾಧ್ಯಕ್ಷ ಕೋಳೇನಹಳ್ಳಿ ಸತೀಶ್, ಜ.6ರ ಬುಧವಾರ ಬೆಳಿಗ್ಗೆ 10 ಗಂಟೆಗೆ ನಗರದ ಬೀರಲಿಂಗೇಶ್ವರ ದೇವಸ್ಥಾನದ ಮೈದಾನದಲ್ಲಿ ಸಮಾವೇಶ ಆರಂಭವಾಗಲಿದೆ. ಸಮಾವೇಶದಲ್ಲಿ 25 ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಕೆ. ವಿರೂಪಾಕ್ಷಪ್ಪ ಅವರು ಸಮಾವೇಶದ ಅಧ್ಯಕ್ಷತೆ ವಹಿಸಲಿದ್ದಾರೆ. ಕನಕ ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸಮಾರಂಭದ ದಿವ್ಯಸಾನಿಧ್ಯ ವಹಿಸಲಿದ್ದಾರೆ. ಶಾಖಾ ಮಠದ ಗುರುಗಳಾದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಶ್ರೀ ಶಿವಾನಂದಪುರಿ ಸ್ವಾಮೀಜಿ ಹಾಗೂ ತಿಂಥಿಣಿ ಮಠದ ಶ್ರೀ ಸಿದ್ದರಾಮ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ ಎಂದರು.

ಸಚಿವ ಕೆ.ಎಸ್. ಈಶ್ವರಪ್ಪ ಅವರು ಸಮಾವೇಶ ಉದ್ಘಾಟಿಸಲಿದ್ದಾರೆ. ಸಮಾವೇಶದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಮಾಜಿ ಸಚಿವರಾದ ಹೆಚ್.ಎಂ. ರೇವಣ್ಣ, ಬಂಡೆಪ್ಪ ಕಾಶೆಂಪುರ್, ಹೆಚ್. ವಿಶ್ವನಾಥ್, ಸಮಾಜದ ಮುಖಂಡರಾದ ಆರ್. ಶಂಕರ್, ಎಂ.ಟಿ.ಬಿ. ನಾಗರಾಜ್, ರಾಮಪ್ಪ ಮತ್ತಿತರರು ಭಾಗವಹಿಲಿದ್ದಾರೆ ಎಂದರು.

ಸಮಾಜದ ಮುಖಂಡ ಹಾಗೂ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಇಡೀ ರಾಜ್ಯದಲ್ಲಿ ಕುರುಬ ಸಮುದಾಯ ಎಸ್‌ಟಿ ಮೀಸಲಾತಿಗೆ ಎದ್ದು ಕುಳಿತಿದೆ. ನಗರದಲ್ಲಿ ನಡೆಯಲಿರುವ ಸಮಾವೇಶಕ್ಕೆ ಸಕಲ ವ್ಯವಸ್ಥೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಹೋರಾಟ ಸಮಿತಿಯ ರಾಜ್ಯ ಸಂಚಾಲಕ ರಾಜೇಂದ್ರ ಹಾವೇರಣ್ಣನವರ್, ರಾಜ್ಯ ಸಂಘಟನಾ ಕಾರ್ಯದರ್ಶಿ ಮಂಜುನಾಥ್, ಸಮಾಜದ ಮುಖಂಡರಾದ ಕೊಟ್ರಬಸಪ್ಪ, ಜಿ.ಪಂ. ಸದಸ್ಯ ಜಿ.ಸಿ. ಲಿಂಗಪ್ಪ ಹಾಗೂ ಜಿ.ಪಂ. ಮಾಜಿ ಅಧ್ಯಕ್ಷೆ ಜಯಶೀಲಾ ಮತ್ತಿತರರು, ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಮಾವೇಶ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಪಾಲಿಕೆ ಸದಸ್ಯೆ ಜಯಮ್ಮ, ರಾಜೇಂದ್ರ, ಮಂಜುನಾಥ್, ಮಾರುತಿ ಹರಿಹರ್, ಗುರುನಾಥ, ಕುಂದುವಾಡ ಗಣೇಶ್ ಮತ್ತಿತರರು ಉಪಸ್ಥಿತರಿದ್ದರು.

### ಸಿದ್ದರಾಮಯ್ಯ ಮನವೊಲಿಕೆಗೆ ಕಾರ್ಯಕಾರಿ ಸಮಿತಿ ನಿರ್ಧಾರ

**(1ನೇ ಪುಟದಿಂದ)** **ರಾಜೇಂದ್ರ ಹಾವೇರಣ್ಣನವರ್ ತಿಳಿಸಿದ್ದಾರೆ. ಸಿದ್ದರಾಮಯ್ಯ ಮನೆಗೆ ಹೋಗಿ ಅವರ ಮನವೊಲಿಸಿ, ಬೆಂಗಳೂರಿನಲ್ಲಿ ನಡೆಯಲಿರುವ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಕೇಳಲು ನಿನ್ನೆ ನಡೆದ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದವರು ಹೇಳಿದ್ದಾರೆ.**

**ಮೀಸಲಾತಿ ಹೋರಾಟದ ಹಿಂದೆ ಆರ್‌ಎಸ್‌ಎಸ್ ಇದೆ ಎಂದು ಸಿದ್ದರಾಮಯ್ಯ ಆರೋಪಿಸಿದ್ದು, ಇದುವರೆಗೂ ಹೋರಾಟದಲ್ಲಿ ಕಾಣಿಸಿಕೊಂಡಿಲ್ಲ.**

## ನಗರಕ್ಕೆ ಇಂದು ರೋಟರಿ ರಾಜ್ಯಪಾಲ ರೆಡ್ಡಿ



ರೋಟರಿ ಜಿಲ್ಲೆ 3160 ರಾಜ್ಯಪಾಲ ಚಿನ್ನಪ್ಪ ರೆಡ್ಡಿ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ರೋಟರಿ ಬಾಲ ಭವನದಲ್ಲಿ ನಡೆಯಲಿರುವ ಸಭೆಯಲ್ಲಿ ಭಾಗವಹಿಸಲಿರುವ ಅವರು, ನಂತರ ಸುಕ್ಷೇಮ ಆಸ್ಪತ್ರೆಗೆ ಭೇಟಿ ನೀಡಲಿದ್ದಾರೆ. ಕ್ಯಾನ್ಸರ್ ಶಸ್ತ್ರ ತಜ್ಞ ಡಾ|| ಸುನೀಲ್ ಬ್ಯಾಡಗಿ ಅವರೊಂದಿಗೆ ರೋಟರಿಯಿಂದ ಆಯೋಜಿಸಲಾಗುತ್ತಿರುವ ಕ್ಯಾನ್ಸರ್ ಸಂಬಂಧಿತ ಗ್ಲೋಬಲ್ ಗ್ರ್ಯಾಂಟ್ ಯೋಜನೆ ಕುರಿತು ಚರ್ಚಿಸಲಿದ್ದಾರೆ ಎಂದು ದಾವಣಗೆರೆ ರೋಟರಿ ಅಧ್ಯಕ್ಷ ಆರ್.ಟಿ. ಮೃತ್ಯುಂಜಯ ತಿಳಿಸಿದ್ದಾರೆ.

## ನಗರದಲ್ಲಿ ಚೆಸ್ ತರಬೇತಿ

ದಾವಣಗೆರೆ,ಡಿ.4- ಲಕ್ಷ್ಮಿ ಫ್ಲೋರ್ ಮಿಲ್ ಹಿಂಭಾಗದ ಎಸ್.ಎಸ್. ಬಡಾವಣೆ 'ಎ' ಬ್ಲಾಕ್ 2ನೇ ಮುಖ್ಯ ರಸ್ತೆಯಲ್ಲಿ ಚೆಸ್ ತರಬೇತಿ ನಡೆಯಲಿದೆ.ಆರು ವರ್ಷ ಮೇಲ್ಪಟ್ಟ ಮಕ್ಕಳು ಭಾಗವಹಿಸಬಹುದು ಎಂದು ಸಂಚಾಲಕರಾದ ಶ್ರೀಮತಿ ನಿರ್ಮಲಾ ಸುಭಾಷ್ (98441-53466, 79757-54042) ತಿಳಿಸಿದ್ದಾರೆ.

## ಕನಗೊಂಡನಹಳ್ಳಿಯಲ್ಲಿ ಇಂದು ಮಹೇಶ್ವರ ಜಾತ್ರೆ

ದಾವಣಗೆರೆ ತಾಲ್ಲೂಕು ಕನಗೊಂಡನಹಳ್ಳಿ ಗ್ರಾಮದಲ್ಲಿ ಇಂದು ಮಹೇಶ್ವರ ಸ್ವಾಮಿ ಜಾತ್ರೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

# ಹರಿಹರದಲ್ಲಿ ನಾಳೆ ಮಾದಿಗ ಸಮಾಜದಿಂದ ಗ್ರಾ.ಪಂ. ಸದಸ್ಯರಿಗೆ ಸನ್ಮಾನ



ಹರಿಹರ, ಜ4- ಹರಿಹರ ಮಾದಿಗ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿರುವ ಮಾದಿಗ ಸಮಾಜದ ನೂತನ ಸದಸ್ಯರಿಗೆ ಸನ್ಮಾನ, ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ, ಕಟ್ಟಡ ಕಾರ್ಮಿಕರ ಕಾರ್ಡ್ ವಿತರಣೆ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 6ರ ಬುಧವಾರ ಬೆಳಿಗ್ಗೆ 12 ಗಂಟೆಗೆ ಇಲ್ಲಿನ ಗುರುಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿ ಕಾರ್ಯದರ್ಶಿ ಎಂ.ಎಸ್. ಆನಂದ್ ಕುಮಾರ್ ತಿಳಿಸಿದರು. ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಮಾರಂಭದ ಸಾನ್ನಿಧ್ಯವನ್ನು ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ವಹಿಸಲಿದ್ದಾರೆ. ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸಲಿದ್ದು, ಶಾಸಕ ಎಸ್. ರಾಮಪ್ಪ ಅಧ್ಯಕ್ಷತೆ ವಹಿಸುವರು. ರಾಜ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಬಿ.ಹೆಚ್. ಅನಿಲ್ ಕುಮಾರ್ ಮತ್ತು ಆಂಧ್ರಪ್ರದೇಶದ ಯೋಜನಾ ನಿರ್ದೇಶಕ ಎ.ಪಿ.ಹೆಚ್. ಎಸ್.ಪಿ ಡಾ. ವಿ. ವಿನೋದ್ ಕುಮಾರ್, ಮುಖ್ಯ ಅತಿಥಿಗಳಾಗಿ ಮಾಜಿ ಸಂಸದ ಎ. ನಾರಾಯಣಸ್ವಾಮಿ, ಕೃಷ್ಣಮೂರ್ತಿ ಪುರುಷೋತ್ತಮ್, ಉಪಸಭಾಪತಿ ಡಾ. ಎಲ್. ಹನುಮಂತಯ್ಯ, ಹೆಚ್. ವಿಶ್ವನಾಥ್ ಆಗಮಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಮಾಜಿ ಶಾಸಕ ಬಿ.ಪಿ. ಹರೀಶ್, ಹೆಚ್.ಎಸ್. ಶಿವಶಂಕರ್, ವಕೀಲ ಎ. ಹನುಮಂತಪ್ಪ, ಎನ್.ಹೆಚ್. ಶ್ರೀನಿವಾಸ್, ತಾ.ಪಂ. ಅಧ್ಯಕ್ಷೆ ಶ್ರೀದೇವಿ ಮಂಜಪ್ಪ, ನಗರಸಭೆ ಸದಸ್ಯ ರಜನಿಕಾಂತ್, ಪಿ.ಎನ್. ವಿರೂಪಾಕ್ಷಪ್ಪ, ಹನುಮಂತಪ್ಪ, ಮಾಜಿ ನಗರಸಭೆ ಅಧ್ಯಕ್ಷ ಕೆ. ಮರಿದೇವ ಹಾಗು ಇನ್ನಿತರೆ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ವೈ.ಬಿ. ಪ್ರಭಾಕರ್, ಸಿ. ನಿಂಗರಾಜ್, ಕೇಶವ ಕಂಚಿಕೇರಿ, ಎಸ್.ಕೆ. ರಾಮಪ್ಪ, ಹೆಚ್. ಶಿವಪ್ಪ, ರಾಕೇಶ್ ಇನ್ನಿತರರಿದ್ದರು.

# 24ನೇ ವಾರ್ಡಿನಲ್ಲಿ ಪಾಲಿಕೆಯಿಂದ ಸಿಸಿ ರಸ್ತೆ ಕಾಮಗಾರಿಗೆ ಪೂಜೆ



ದಾವಣಗೆರೆ, ಜ.4- ನಗರ ಪಾಲಿಕೆ ವ್ಯಾಪ್ತಿಯ 24ನೇ ವಾರ್ಡಿನ 4ನೇ ಮೇನ್, 8 ನೇ ಕ್ರಾಸ್‌ನಲ್ಲಿ ಪಾಲಿಕೆ ವತಿಯಿಂದ ಹೊಸ ಸಿ.ಸಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್, ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿ ಸ್ವಾಮಿ, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರೂ ಆದ ವಾರ್ಡಿನ ಪಾಲಿಕೆ ಸದಸ್ಯ ಕೆ.ಪ್ರಸನ್ನ ಕುಮಾರ್ ಹಾಗೂ ಎಸ್.ಟಿ.ವೀರೇಶ್, ಗೌರಮ್ಮ ಗಿರೀಶ್, ನರೇಂದ್ರ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಮಾಜಿ ಮಹಾಪೌರರಾದ ಶ್ರೀಮತಿ ಸುಧಾ ಜಯರುದ್ರೇಶ್, ವಾರ್ಡಿನ ಮುಖಂಡರಾದ ಜಯರುದ್ರೇಶ್, ಡಾ.ಅಶ್ವಿನ್, ಡಾ. ಹೆಚ್.ಎನ್.ಮಲ್ಲಿಕಾರ್ಜುನ್, ಡಾ. ವಿ.ಎಸ್. ನಾಗಪ್ರಕಾಶ್, ಪದ್ಮನಾಭ್ ಶೆಟ್ರು, ಶೇಖರ್ ಉಪ್ಪಿನ್, ಕಿರಣ್ ಕುಮಾರ್, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಚಿನ್, ಯುವ ಮುಖಂಡರಾದ ಕಿಶೋರ್, ಕಿರಣ್, ವಿವೇಕ್, ಅನಿಲ್, ಮಹಿಳಾ ಮುಖಂಡರಾದ ಉಷಾ ಪದ್ಮನಾಭ್ ಮತ್ತಿತರರು ಉಪಸ್ಥಿತರಿದ್ದರು.

# ಹೊಸಚಿಕ್ಕನಹಳ್ಳಿಯಲ್ಲಿ ನೀರಿನ ಟ್ಯಾಂಕ್‌ಗೆ ಗುದ್ದಲಿ ಪೂಜೆ



ದಾವಣಗೆರೆ, ಜ.4- ಜಲಸಿರಿ ಯೋಜನೆಯಡಿ ಯಲ್ಲಿ ಹೊಸಚಿಕ್ಕನಹಳ್ಳಿಯಲ್ಲಿ ನೀರು ಶೇಖರಣೆ ಟ್ಯಾಂಕ್ ನಿರ್ಮಾಣದ ಗುದ್ದಲಿ ಪೂಜೆ ಕಾರ್ಯಕ್ರಮವನ್ನು ಶಾಸಕ ಎಸ್.ಎ. ರವೀಂದ್ರನಾಥ್ ಅವರು ನೆರವೇರಿಸಿದರು.

ಈ ಸಂದರ್ಭದಲ್ಲಿ 30ನೇ ವಾರ್ಡ್ ಪಾಲಿಕೆ ಸದಸ್ಯರೂ, ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರೂ ಆದ ಶ್ರೀಮತಿ ಜಯಾಬಾಯಿ ಗೋಪಿನಾಯ್ಕ, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಪ್ರಸನ್ನ ಕುಮಾರ್, ಎಸ್.ಟಿ. ವೀರೇಶ್, ನಗರ ಪಾಲಿಕೆ ಮಾಜಿ ಸದಸ್ಯ ಹೆಚ್.ಜಿ. ಉಮೇಶ್ ಆವರಗೆರೆ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಬಿ. ಮಲ್ಲಾಪುರ, ಜಲಸಿರಿ ಯೋಜನೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ರವಿಕುಮಾರ್, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸಂಗನಗೌಡ್ರು ಬೇತೂರು, ಶಂಕರಪ್ಪ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಟ್ಯಾಂಕ್ ನಿರ್ಮಾಣಕ್ಕೆ ಉಚಿತವಾಗಿ ನಿವೇಶನ ನೀಡಿದ ದಾನಿಗಳಾದ ಶ್ರೀಮತಿ ಸುಂಕಮ್ಮ ದೇವರಮನೆ ರೇವಣಸಿದ್ದಪ್ಪ ಅವರುಗಳನ್ನು ಸನ್ಮಾನಿಸಲಾಯಿತು.

## ಎನ್‌ಆರ್‌ಸಿಗೆ ದಾಖಲಿಸದಿದ್ದರೆ ಕ್ರಮ

**(1ನೇ ಪುಟದಿಂದ)** ಅಪೌಷ್ಟಿಕತೆಯಿಂದ ಹೊರತರ ಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪ ನಿರ್ದೇಶಕ ವಿಜಯಕುಮಾರ್ ಮಾತನಾಡಿ, 2020-21 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು 62 ಬಾಲ್ಯ ವಿವಾಹ ಪ್ರಕರಣ ದಾಖಲಾಗಿದ್ದು, ಈ ಪೈಕಿ 61 ಬಾಲ್ಯ ವಿವಾಹಗಳನ್ನು ತಡೆಯಲಾಗಿದೆ. ಒಂದು ಬಾಲ್ಯ ವಿವಾಹ ನಡೆದಿದ್ದು ಎಫ್‌ಐಆರ್ ದಾಖಲಿಸಲಾಗಿದೆ ಎಂದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಕೋವಿಡ್ ಹಿನ್ನೆಲೆಯಲ್ಲಿ ಶಾಲಾ-ಕಾಲೇಜು ಆರಂಭವಾಗಿಲ್ಲವೆಂದು ಎಷ್ಟೋ ಪೋಷಕರು ತಮ್ಮ ಮಕ್ಕಳನ್ನು ಮದುವೆ ಮಾಡುತ್ತಿದ್ದಾರೆ. ಆದ ಕಾರಣ ಬಾಲ್ಯ ವಿವಾಹ ತಡೆ ತಂಡ ಆದಷ್ಟು ಸಕ್ರಿಯವಾಗಿ ಕೆಲಸ ಮಾಡಬೇಕು ಎಂದರು.

**ಬಾಡಿಗೆ ಕಟ್ಟಡ ಬೇಡ :** ಜಿಲ್ಲೆಯಲ್ಲಿ ಒಟ್ಟು 1721 ಅಂಗನವಾಡಿ ಕಟ್ಟಡಗಳಿದ್ದು ನಗರದಲ್ಲೇ 375 ಅಂಗನವಾಡಿಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಖಾಸಗಿ ಕಟ್ಟಡದಲ್ಲಿ ಅಂಗನವಾಡಿ ನಡೆಸುವುದು ಬೇಡ. ಸರ್ಕಾರಿ ಜಮೀನು ನೀಡಲಾಗುವುದು. ಎಸ್‌ಸಿಪಿ/ಟಿಎಸ್‌ಪಿ ಮತ್ತು ಇತರೆ ಯೋಜನೆಗಳಡಿ ಕಟ್ಟಡಗಳನ್ನು ನಿರ್ಮಿಸಬೇಕು. ಹಾಗೂ ಶಾಲೆಗಳ ಹೆಚ್ಚುವರಿ ಕಟ್ಟಡವನ್ನು ಅಂಗನವಾಡಿ ಕಟ್ಟಡವಾಗಿ ಬಳಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಇನ್ನು ಮುಂದೆ ಬಾಡಿಗೆ ಕಟ್ಟಡದಲ್ಲಿ ಅಂಗನವಾಡಿ ನಡೆಸಬಾರದು. ಆದಷ್ಟು ಶೀಘ್ರದಲ್ಲೇ ಜಾಗ ಗುರುತಿಸಿ ಸ್ವಂತ ಕಟ್ಟಡಗಳನ್ನು ಹೊಂದಬೇಕೆಂದು ಸೂಚನೆ ನೀಡಿದ ಅವರು ತಾವು, ಸಿಇಓ ಅಂಗನವಾಡಿ ಕೇಂದ್ರಗಳಿಗೆ ದಿಢೀರ್ ಭೇಟಿ ನೀಡುವುದಾಗಿ ಡಿಸಿ ತಿಳಿಸಿದರು.

ಇದೇ ವೇಳೆ ಬಾಲ್ಯ ವಿವಾಹ ತಡೆಗೆ ಸಂಬಂಧಿಸಿದ ಕೈಪಿಡಿಯನ್ನು ಜಿಲ್ಲಾಧಿಕಾರಿ, ಜಿ.ಪಂ ಸಿಇಓ ಪದ್ಮಾ ಬಸವಂತಪ್ಪ ಸೇರಿದಂತೆ ಅಧಿಕಾರಿಗಳು ಬಿಡುಗಡೆ ಮಾಡಿದರು.

ಸಭೆಯಲ್ಲಿ ಡಿವೈಎಸ್‌ಪಿ ಬಿ.ಎಸ್. ಬಸವರಾಜ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕೆ.ಸಿ.ಬಸವರಾಜಯ್ಯ, ಜಿ.ಪಂ. ಮುಖ್ಯ ಯೋಜನಾಧಿಕಾರಿ ಲೋಕೇಶ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಗಂಗಾಧರ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಕೌಸರ್ ರೇಷ್ಮಾ, ಲೀಡ್ ಬ್ಯಾಂಕ್ ಮ್ಯಾನೇಜರ್ ಸುಶ್ರುತ ಡಿ.ಶಾಸ್ತ್ರಿ ಇತರರು ಉಪಸ್ಥಿತರಿದ್ದರು.

## ಏಕಮುಖ ವಾಹನ ನಿಲುಗಡೆಗೆ ಆದೇಶ

**(1ನೇ ಪುಟದಿಂದ)** ಹಾಗೂ ವಾಹನ ದಟ್ಟಣೆಗೆ ಬಹುತೇಕ ರಸ್ತೆ ಕಿರಿದಾಗಿರುತ್ತದೆ. ಈ ರಸ್ತೆಯಲ್ಲಿ ಪ್ರತಿಷ್ಠಿತ ಜವಳಿ ವಾಣಿಜ್ಯ ಮಳಿಗೆಗಳು, ಪ್ರಮುಖ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಹಾಗೂ ಇತರೆ ಶಾಲಾ-ಕಾಲೇಜು ಇತ್ಯಾದಿಗಳು ಇರುವುದರಿಂದ ಇಲ್ಲಿ ಎರಡೂ ಕಡೆ ವಾಹನ ನಿಲುಗಡೆ ಮಾಡುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗುವುದರೊಂದಿಗೆ ಪಾದಚಾರಿಗಳು ರಸ್ತೆ ಮಧ್ಯೆ ಓಡಾಡುವುದರಿಂದ ಹಾಗೂ ರಸ್ತೆ ದಾಟುವುದರಿಂದ ಸಂಚಾರ ನಿರ್ವಹಣೆ ಕರ್ತವ್ಯ ಮಾಡುವುದು ದುಸ್ತರವಾಗಿದೆ.

ಈ ರಸ್ತೆಯು ಮೋದಿ ವೃತ್ತದ ಪ್ರಾರಂಭದಿಂದ ತರಳಬಾಳು ಶಾಲೆಯ ವರೆಗೆ ಇದ್ದು ಮೋದಿ ವೃತ್ತದಿಂದ ಹೋಗುವ ಮಾರ್ಗದ 'ಎಡಭಾಗದ ಕಡೆಗೆ ಏಕಮುಖ ವಾಹನ ನಿಲುಗಡೆ ಹಾಗೂ ಬಲ ಭಾಗದ ಕಡೆ ವಾಹನ ನಿಲುಗಡೆ ನಿಷೇಧವನ್ನು ಮಾಡುವುದರಿಂದ ಜೆ. ಹೆಚ್. ಪಟೇಲ್ ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ಅನುಕೂಲವಾಗಿರುತ್ತದೆ. ಈ ವಾಹನ ನಿಲುಗಡೆ ವ್ಯವಸ್ಥೆಯು ಜಿ. ಪಿ.ಎಸ್ ಜಾಗತಿಕ ಸ್ಥಾನೀಕರಣ ವ್ಯವಸ್ಥೆಯ ವಾಹನ ನಿಲುಗಡೆ (ಜಿಪಿಎಸ್-ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ ಇನ್ ವೆಹಿಕಲ್ ಪಾರ್ಕಿಂಗ್) ಈ ವ್ಯವಸ್ಥೆಯಿಂದ ಮಾಡಲಾಗುವುದು.

ಅದೇ ರೀತಿ ಈ ಪ್ರಮುಖ ರಸ್ತೆಗೆ ಹೊಂದಿಕೊಂಡಂತೆ ಬರುವ ಎಲ್ಲಾ ಕೂಡು ರಸ್ತೆಗಳಲ್ಲಿ ವಾಹನಗಳ ನಿಲುಗಡೆ ಬಳಕೆ ಮಾಡಿಕೊಳ್ಳುವುದರ ಜೊತೆಗೆ ಪಾದಚಾರಿಗಳ ಹಾಗೂ ವಾಹನ ಸವಾರರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವ ಉದ್ದೇಶದಿಂದ ಮತ್ತು ನಾಗರಿಕರ ಹಿತ ದೃಷ್ಟಿಯಿಂದ 'ಎಡಭಾಗದ ಕಡೆಗೆ ಏಕ ಮುಖ ವಾಹನ ನಿಲುಗಡೆ ಹಾಗೂ ಬಲ ಭಾಗದ ಕಡೆ ವಾಹನ ನಿಲುಗಡೆ ನಿಷೇಧಿಸಿ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

## ವಾದ್ರಾ ನಿವಾಸಕ್ಕೆ ಐ.ಟಿ.ಅಧಿಕಾರಿಗಳ ಭೇಟಿ

**(1ನೇ ಪುಟದಿಂದ)** ಸಾಧ್ಯವಾಗುವುದಿಲ್ಲ ಎಂದು ವಾದ್ರಾ ಹೇಳಿದ್ದರು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳೇ ದೆಹಲಿಯಲ್ಲಿರುವ ವಾದ್ರಾ ನಿವಾಸಕ್ಕೆ ಭೇಟಿ ನೀಡಿದ್ದರು.


## ಹೃದಯಪೂರ್ವಕ ಅಭಿನಂದನೆಗಳು







**ಶ್ರೀಮತಿ ಕೆಂಚೇನಹಳ್ಳಿ ಸುಶೀಲಮ್ಮನವರು**

ಹುಟ್ಟು ಕಾಯಕ ಯೋಗಿಗಳಾಗಿದ್ದು, ಸರಳ ಜೀವನವನ್ನು ರೂಢಿಸಿಕೊಂಡಿರುವವರು, ಹಲವಾರು ಸಮಾಜ ಮುಖಿ ಕಾರ್ಯಗಳನ್ನು ಕೈಗೊಂಡಿರುವವರು. ಇಂತಹ ಸಹೃದಯಿ ವ್ಯಕ್ತಿತ್ವ ಹೊಂದಿರುವ ಶ್ರೀಯುತರಿಗೆ ಈ ಬಾರಿಯ 'ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ', ನೀಡಿ ಗೌರವಿಸಲಾಗಿದೆ.

**ಶ್ರೀಮತಿ ನೀಲಗುಂದ ಜಯಮ್ಮನವರು**

ಬಹುಮುಖ ಪ್ರತಿಭೆ, "ಆಡು ಮುಟ್ಟದ ಸೊಪ್ಪಿಲ್ಲ ಜಯ್ಯಮ್ಮನವರು ಸ್ಪರ್ಶಿಸದ ಕ್ಷೇತ್ರವಿಲ್ಲ" ಎಂದರೆ ಅತಿಶಯೋಕ್ತಿಯಾಗಲಾರದು, ಶ್ರೀಯುತರು ಶಿಕ್ಷಣ, ಸಾಹಿತ್ಯ, ಕಲೆ, ಮಹಿಳಾ ಸಬಲೀಕರಣ, ಸಮಾಜ ಸೇವೆ ಇನ್ನೂ ಹತ್ತು ಹಲವು ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಯುತರಿಗೆ ಈ ಬಾರಿಯ 'ಕದಳಿಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಇವರಿಗೆ ಅಭಿನಂದನೆ ಕೋರುವವರು :

**ಮಹಿಳಾ ಸೇವಾ ಸಮಾಜ ನರ್ಸರಿ, ಪ್ರಾಥಮಿಕ, ಪ್ರೌಢಶಾಲೆ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗ, ಚೆನ್ನಮ್ಮ ಮಹೇಶ್ವರಯ್ಯ ಮೆಮೋರಿಯಲ್ ಪದವಿ ಪೂರ್ವ ಕಾಲೇಜ್ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗ, ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗ, ದಾವಣಗೆರೆ.**



# PUBLIC NOTICE

1) PUBLIC ARE INFORMED BY THIS **CONSTRUCTIVE NOTICE** NOT TO ENTER INTO ANY TRANSACTION ( SALE, GIFT, MORTAGAGE, LEASE, RENT OR OTHERWISE) WITH SCHEDULED PROPERTY ADDRESS BELOW MENTIONED.

2) KHATA & TITLE OF THE SCHEDULED PROPERTY IS IN THE NAME OF SRIPADA DIXIT IN DAVANAGERE CITY CORPORATION. (SRIPADA DIXIT IS GRAND FATHER OF VINAY K DIXIT, SANJAY K DIXIT, FATHER IN LAW OF BANU K DIXIT).

3) VINAY K DIXIT S/O KRISHNA MURTHY DIXIT, SANJAY K DIXIT S/O KRISHNA MURTHY DIXIT, BANU K DIXIT W/O KRISHNA MURTHY DIXIT ARE IN "DWELLING POSSESSION" SINCE MORE THAN 40 YEARS, IN THE SCHEDULED PROPERTY, FURTHER, ARE LEGAL HEIRS OF THE SCHEDULED PROPERTY.

4) FIVE OF OTHER HEIRS ( OTHER GRANDSONS OF SRIPADA DIXIT) HAVE TRIED TO TRANSFER THE KHATA OF THE SCHEDULED PROPERTY, ADDRESS BELOW MENTIONED, IN THEIR NAME (JOINT KHATA) BY SUBMITTING FALSE FAMILY TREE (DELETING NAMES OF OTHER HEIRS) IN DAVANAGERE CITY CORPORATION.

5) DUE TO WHICH VINAY K DIXIT ( PARTY IN PERSON) HAS FILED CRIMINAL CASE NUMBERED AS PCR 322/2019 AGANIST THOSE FIVE HEIRS, PENDING ON FILE OF HON'BLE FIRST JMFC DAVANAGERE.

6) ANY PUBLIC (PERSONS, BANKS, TRUSTS, FINANCIAL INSTITUTIONS OR OTHERWISE) WILL BE SOLELY RESPONSIBLE FOR ANY CRIMINAL/ CIVIL LIABILITY WHICH MAY ARISE OUT OF SUCH TRANSACTION, THEY ENTER INTO WITH SCHEDULED PROPERTY.

**SCHEDULED PROPERTY: DIMENSION (41 FEET × 100.72 FEET)**

**OLD DOOR NO 320/1,2,3, NEW DOOR NUMBER 879/1,2,3, DIXIT HOUSE, DIXIT STREET, K.B. EXTENSION, NEXT TO RAGHAVENDRA MUTT, WARD NO 25 ( 22) DAVANAGERE- 577002.**

**SCHEDULED PROPERTY BOUND BY**

**NORTH BY: DOOR NO 319, PROPERTY OF RANGANATH DIXIT. SOUTH BY: DOOR NO 321, RAGHAVENDRA MUTT EAST BY: CONSERVANCY OF DAVANAGERE CITY CORPORATION**

**WEST BY: DIXIT STREET ( ASHOKA ROAD EAST).**

***VINAY K. DIXIT PH. : 9632826048***

# 200 ರೂ.ನಂತೆ ಕೊರೊನಾ ಲಸಿಕೆ : ಪೂನಾವಾಲಾ

## 100 ದಶಲಕ್ಷ ಲಸಿಕೆಗಳ ಪೂರೈಕೆಗೆ ಒಪ್ಪಂದ

ನವದೆಹಲಿ, ಜ. 4 - ಭಾರತ ಸರ್ಕಾರಕ್ಕೆ 100 ದಶಲಕ್ಷ ಕೊರೊನಾ ಲಸಿಕೆಯ ಡೋಸ್‌ಗಳನ್ನು ವಿಶೇಷ ದರವಾಗಿ 200 ರೂ.ಗಳಿಗೆ ಒಂದರಂತೆ ನೀಡುವುದಾಗಿ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿಇಒ ಅದರ್ ಪೂನಾವಾಲಾ ಹೇಳಿದ್ದಾರೆ.

ಲಸಿಕೆ ಉತ್ಪಾದನೆಗಾಗಿ ಈ ಕಂಪನಿಯು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಹಾಗೂ ಅಸ್ಟ್ರಾಜೆನೆಕಾಗಳ ಜೊತೆ ಕೈ ಜೋಡಿಸಿದೆ. ಭಾನುವಾರ ಲಸಿಕೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿತ್ತು. ಕೊವಿಶೀಲ್ಡ್ ಹೆಸರಿನಲ್ಲಿ ಈ ಲಸಿಕೆ ಉತ್ಪಾದಿಸಲಾಗುತ್ತಿದೆ. ಹಲವು ತಿಂಗಳವರೆಗೆ ಲಸಿಕೆ ರಫ್ತು ಮಾಡದಂತೆ ನಿರ್ಬಂಧ ಹೇರಲಾಗಿದೆ. ಖಾಸಗಿ ಮಾರುಕಟ್ಟೆಯಲ್ಲೂ ಸಹ ಲಸಿಕೆಯನ್ನು ಮಾರುವಂತಿಲ್ಲ ಎಂದು ಪೂನಾವಾಲಾ ಹೇಳಿದ್ದಾರೆ.

ಶ್ರೀಮಂತ ದೇಶಗಳು ಈ ವರ್ಷ ಉತ್ಪಾದನೆಯಾಗುವ ಬಹುತೇಕ ಲಸಿಕೆಗಳನ್ನು ಖರೀದಿಸಿವೆ. ಹೀಗಾಗಿ ವಿಶ್ವದ ಅತಿ ದೊಡ್ಡ ಲಸಿಕೆ ಉತ್ಪಾದನಾ ಕಂಪನಿಯಾದ ಸೆರಮ್ ಇನ್‌ಸ್ಟಿಟ್ಯೂಟ್ ಅಭಿವೃದ್ಧಿಶೀಲ ದೇಶಗಳಿಗೆ ಲಸಿಕೆ ಪೂರೈಸುವ ಸಾಧ್ಯತೆ ಇದೆ. ಆ ದೇಶಗಳೂ ಸಹ ಕೆಲ ತಿಂಗಳವರೆಗೆ ಲಸಿಕೆ ಪಡೆಯಲು ಸಾಧ್ಯವಾಗುವುದಿಲ್ಲ.

ಪ್ರಸಕ್ತ ನಾವು ಭಾರತ ಸರ್ಕಾರಕ್ಕಷ್ಟೇ ಲಸಿಕೆ ಪೂರೈಸಲು ಸಾಧ್ಯ ಎಂದಿರುವ ಪೂನಾವಾಲಾ, ಮಾರ್ಚ್ ಇಲ್ಲವೇ ಏಪ್ರಿಲ್ ತಿಂಗಳವರೆಗೂ ರಫ್ತು ಸಾಧ್ಯವಿಲ್ಲ ಎಂದಿದ್ದಾರೆ. ಪ್ರಸಕ್ತ ಭಾರತ ಸರ್ಕಾರಕ್ಕೆ 200 ರೂ.ಗಳ ವಿಶೇಷ ದರದಲ್ಲಿ ಪ್ರತಿ ಡೋಸ್ ಲಸಿಕೆ ಮಾರಲಾಗುವುದು. ನಂತರದಲ್ಲಿ ಖಾಸಗಿ ಮಾರುಕಟ್ಟೆಯಲ್ಲಿ ಲಸಿಕೆಯನ್ನು 1,000 ರೂ.ಗಳಿಗೆ ಒಂದು ಡೋಸ್‌ನಂತೆ ಮಾರಲಾಗುವುದು ಎಂದವರು ವಿವರಿಸಿದ್ದಾರೆ.

ಡಿಸೆಂಬರ್ 2021ರ ಒಳಗೆ 200ರಿಂದ 300 ದಶಲಕ್ಷ ಕೊರೊನಾ ಲಸಿಕೆಯ ಡೋಸ್‌ಗಳನ್ನು ಉತ್ಪಾದಿಸಲು ಗುರಿ ಹೊಂದಿದ್ದೇವೆ. ಭಾರತ ಹಾಗೂ ಇತರೆ ದೇಶಗಳಿಗೆ ಲಸಿಕೆ ಪೂರೈಸುವುದರ ನಡುವೆ ಸಮತೋಲನ ಹೊಂದಬೇಕಿದೆ ಎಂದು ಪೂನಾವಾಲಾ ತಿಳಿಸಿದ್ದಾರೆ.

# ಮದ್ಯಪಾನದಿಂದ ಜನರ ಮನೆ-ಮನಸ್ಸುಗಳು ಹಾಳಾಗುತ್ತಿವೆ

## ಭಾರತೀಯ ಗ್ರಾಮೀಣ ಮಹಿಳಾ ಸಂಘದಿಂದ ನಡೆದ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಪ್ರೊ. ಸುಮ ವಿ. ಮಠದ್ ವಿಷಾದ



ದಾವಣಗೆರೆ, ಜ.4- ಪ್ರಸ್ತುತ ಯುವಪೀಳಿಗೆ ಭಾರತೀಯ ಸಂಸ್ಕೃತಿ ಎತ್ತಿ ಹಿಡಿಯುವ ಬದಲು, ಪಾಶ್ಚಿಮಾತ್ಯ ಸಂಸ್ಕೃತಿಗೆ ತಲೆಬಾಗುತ್ತಿದ್ದಾರೆ ಎಂದು ಆವಿಷ್ಕಾರ ಪ್ರಗತಿಪರ ಸಾಂಸ್ಕೃತಿಕ ಸಂಘಟನೆಯ ಜಿಲ್ಲಾ ಸಂಘಟನಾಕಾರರಾದ ಪ್ರೊ. ಸುಮ ವಿ. ಮಠದ್ ಬೇಸರ ವ್ಯಕ್ತಪಡಿಸಿದರು.

ನಗರದ ವನಿತಾ ಸಮಾಜದ ಆವರಣದಲ್ಲಿ ವನಿತಾ ಸಮಾಜದ ಭಾರತೀಯ ಗ್ರಾಮೀಣ ಮಹಿಳಾ ಸಂಘದಿಂದ ಇಂದು ಸಂಜೆ ಏರ್ಪಾಡಾಗಿದ್ದ ನೂತನ ವರ್ಷ 2021ಕ್ಕೆ ಸಂಗೀತ ಸಂಜೆ, ಮಧುರ ಗೀತೆಗಳ ಸಂಗಮ ಮತ್ತು ಕ್ಯಾಂಪ್ ಫೈಯರ್ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕೇವಲ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ದೂಷಿಸುವುದಲ್ಲ. ಕೆಲ ಉತ್ತಮ ವಿಚಾರ, ವಸ್ತುಗಳೂ ಇದ್ದು, ಅವುಗಳನ್ನಷ್ಟೆ ಸದ್ಬಳಕೆಗೆ ಮಾಡಿಕೊಳ್ಳಬೇಕು.

ಇಡೀ ವಿಶ್ವದಲ್ಲೇ ಸಂಸ್ಕೃತಿ ಹಾಳಾಗುತ್ತಿರುವುದರಿಂದ ನಮ್ಮ ದೇಶದ ಸಂಸ್ಕೃತಿಯೂ ಹಾಳಾಗುತ್ತಿದೆ. ಸಾಂಸ್ಕೃತಿಕ ಮಟ್ಟ ಹೆಚ್ಚಾಗಿ ಸಾಂಸ್ಕೃತಿಕ ಸಮಾಜ ನಿರ್ಮಾಣವಾಗುವ ಮುಖೇನ ವಿಶ್ವ ಸಂಸ್ಕೃತಿಯಾಗಬೇಕು ಎಂದು ಆಶಿಸಿದರು.

ಹಿನ್ನೆಲೆ ಗಾಯಕರುಗಳಾದ ಪೂಜಾ, ಶ್ರೀಧರ್, ಪವನ್ ಹಾಗೂ ನ್ಯಾಯಾಂಗ ಇಲಾಖೆಯ ಮತ್ತು ಗಾಯಕರಾದ ಟಿ. ಆರ್. ಹೇಮಂತ್ ಕುಮಾರ್ ಹಳೆಯ ಚಿತ್ರಗೀತೆಗಳು, ಮಧುರ ಗೀತೆಗಳನ್ನು ಹಾಡಿ ಸಂಗೀತ ಲೋಕಕ್ಕೆ ಕೊಂಡೊಯ್ದು ಸಂಗೀತದ ಸವಿ ಉಣಬಡಿಸಿದರು.

ಇದೇ ವೇಳೆ ತಂಪಿನ ವಾತಾವರಣದಲ್ಲಿ ಕ್ಯಾಂಪ್ ಫೈಯರ್ ಮುಖೇನ ಬೆಚ್ಚನೆಯ ಮಡಿಲಲ್ಲಿ ಇಂಪಾದ ಸಂಗೀತ ಮುದವನ್ನುಂಟು ಮಾಡಿತು.

ಈ ಸಂದರ್ಭದಲ್ಲಿ ಬಿಐಇಟಿ ಕಾಲೇಜಿನ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರೊ. ಕೆ. ಗಣೇಶ್, ವನಿತಾ ಸಮಾಜದ ಗೌರವಾಧ್ಯಕ್ಷರಾದ ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ, ಅಧ್ಯಕ್ಷರಾದ ಶ್ರೀಮತಿ ಗುಂಡಿ ಪುಷ್ಪ ಸಿದ್ದೇಶ್, ಕಾರ್ಯದರ್ಶಿ ಶ್ರೀಮತಿ ಗೀತಾ ಬದ್ರಿನಾಥ್ ಸೇರಿದಂತೆ ಇತರರು ಇದ್ದರು.

### ಮದ್ಯಪಾನ ನಿಷೇಧಕ್ಕೆ ಸರ್ಕಾರ ಇನ್ನೂ ಮನಸ್ಸು ಮಾಡದಿರುವುದು ನೋವಿನ ಸಂಗತಿ

ನಮ್ಮ ದೇಶದ ಸಂಸ್ಕೃತಿ ಮಾತ್ರ ಮದ್ಯ ಸೇವನೆಯನ್ನು ವಿರೋಧಿಸುತ್ತಿಲ್ಲ. ಚೈನಾ, ಅಮೇರಿಕಾ ಸೇರಿದಂತೆ ಪಾಶ್ಚಿಮಾತ್ಯ ದೇಶಗಳಲ್ಲೂ ಮದ್ಯಪಾನ ನಿಷೇಧಕ್ಕೆ ಪ್ರಯತ್ನಗಳು ನಡೆದಿವೆ. ಮದ್ಯಪಾನ ಕೇವಲ ಭಾರತಕ್ಕಷ್ಟೇ ಅಲ್ಲ ಇಡೀ ವಿಶ್ವದಲ್ಲೇ ಕಾಡುತ್ತಿದೆ. ಮದ್ಯಪಾನ ಭಾರತೀಯ, ಪಾಶ್ಚಿಮಾತ್ಯ ಸಂಸ್ಕೃತಿ ಅಲ್ಲ. ಮದ್ಯಪಾನದಿಂದ ಜನರ ಮನೆ-ಮನಸ್ಸುಗಳು ಹಾಳಾಗುತ್ತಿವೆ. ಅಲ್ಲದೇ ಸಾಕಷ್ಟು ಅಪರಾಧಗಳು, ಅತ್ಯಾಚಾರ ಪ್ರಕರಣಗಳೂ ಹೆಚ್ಚಾಗುತ್ತಿವೆ. ಅದರಲ್ಲೂ ಮುಖ್ಯವಾಗಿ ಸಮಾಜದ ನಿರ್ಮಾತೃಗಳಾದ ಯುವಪೀಳಿಗೆ ಮದ್ಯಪಾನಕ್ಕೆ ದಾಸ್ಯರಾಗುತ್ತಾ ದಾರಿ ತಪ್ಪುವ ಮೂಲಕ ತಮ್ಮ ಉಜ್ವಲ ಭವಿಷ್ಯವನ್ನೇ ಮರೆಯಾಗಿಸಿಕೊಳ್ಳುತ್ತಿದ್ದಾರೆ ಎಂದು ಪ್ರೊ. ಸುಮ ವಿ. ಮಠದ್ ವಿಷಾದಿಸಿದರು.

ಶತ ಶತಮಾನಗಳಿಂದಲೂ ಮದ್ಯಪಾನ ನಿಷೇಧಕ್ಕೆ ಹೋರಾಟಗಳು ನಡೆದಿದ್ದು, ರಾಜಾರಾಮ್ ಮೋಹನ್ ರಾಯ್, ಜ್ಯೋತಿ ಬಾ ಪುಲೆ ಅವರಂತಹ ಸಂಸ್ಕೃತಿಯ ಪರಿಚಾರಕರು ಸಹ ಹೋರಾಟ ಮಾಡಿದ್ದಾರೆ. ಸಮಾಜದ ಸರ್ವನಾಶಕ್ಕೆ ನಾಂದಿ ಹಾಡುತ್ತಿರುವ ಮದ್ಯಪಾನ ನಿಷೇಧಿಸಲು ಸರ್ಕಾರ ಇನ್ನೂ ಮನಸ್ಸು ಮಾಡದಿರುವುದು ನೋವಿನ ಸಂಗತಿ. ಕುಡಿತದ ದುಷ್ಪರಿಣಾಮ, ನಿಷೇಧದ ಬಗ್ಗೆ ಜ್ಞಾನ ನೀಡಿ ದೊಡ್ಡ ಮಟ್ಟದ ಸಾಂಸ್ಕೃತಿಕ ಚಳುವಳಿಯಾಗಬೇಕಿದೆ ಎಂದು ತಿಳಿಸಿದರು.

ಮದ್ಯ ಮಾರಾಟದಿಂದ ಅಬಕಾರಿ ಇಲಾಖೆಗೆ ಸಾಕಷ್ಟು ಹಣ ಸಂಗ್ರಹವಾಗುತ್ತಿದ್ದು, ಆ ಹಣದಿಂದ ಶಾಲೆ, ರಸ್ತೆ, ಆಸ್ಪತ್ರೆಗಳನ್ನು ಕಟ್ಟಿಸುವುದಾಗಿ ಶುದ್ಧ ಸುಳ್ಳು ಹೇಳಲಾಗುತ್ತಿದೆ. ದುಡಿದು ದಣಿದ ಮನಸ್ಸುಗಳಿಗೆ ಮದ್ಯ ಹರಿಬಿಡಲಾಗುತ್ತಿದ್ದು, ಜ್ಞಾನ ನೀಡುವ ಬದಲು ಹೆಂಡ ನೀಡಿ ಅಮಲಿನ ಮತ್ತನ್ನು ನೀಡುವುದು ಸರಿಯೇ ? ಎಂಬ ಬಗ್ಗೆ ಪ್ರಶ್ನೆಯ ಧ್ವನಿ ಎತ್ತಬೇಕಿದೆ. ಎಲ್ಲಿ ಯವರೆಗೂ ಅಜ್ಞಾನ, ಪ್ರಶ್ನಿಸುವ, ಹೋರಾಟದ ದಿವ್ಯ ಸಂಸ್ಕೃತಿ ಬರುವುದಿಲ್ಲವೋ ಅಲ್ಲಿವರೆಗೂ ಆಳುವ ವರ್ಗಗಳು ಹೀಗೇ ಶೋಷಣೆ ಮಾಡುತ್ತಾ ಹೋಗಲಿವೆ ಎಂದು ಹೇಳಿದರು.

# ಪಂಚಮಸಾಲಿ ಜಗದ್ಗುರು ನೇತೃತ್ವದಲ್ಲಿ ತುಂಗಭದ್ರಾ ನದಿ ದಡದ ಸ್ವಚ್ಛತೆ



ಹರಿಹರ, ಜ. 4 - ತಾಲ್ಲೂಕಿನ ತುಂಗಭದ್ರಾ ನದಿ ತಟದಲ್ಲಿ ಭಾನುವಾರ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದರು.

ಹರಜಾತ್ರೆ ಮತ್ತು ಮಕರ ಸಂಕ್ರಮಣ ಹಾಗೂ ನನ್ನ ಊರು ನನ್ನ ಹೊಣೆಯ ಸ್ಥಳೀಯ ಸಂಸ್ಥೆ ಸಹಕಾರದಿಂದ ಸ್ವಚ್ಛತೆ ನೆರವೇರಿಸಿದರು. ಸತತ ಎರಡನೇ ವಾರ ಶ್ರೀಗಳ ನೇತೃತ್ವದಲ್ಲಿ ಸ್ವಚ್ಛತೆ ಕಾರ್ಯ ನಡೆಯಿತು.


ಪ್ರಧಾನ ಮಂತ್ರಿ ಮೋದಿ ಅತ್ಯಂತ ಮಹತ್ವದ ನಮಾಮಿ ಗಂಗಾ ಯೋಜನೆಯನ್ನು ಆರಂಭಿಸಿದ್ದು, ಗಂಗೆ ಈಗ ಹಿಂದಿಗಿಂತ ಹೆಚ್ಚು ಪವಿತ್ರವಾಗಿ ಹರಿಯುತ್ತಿದ್ದಾಳೆ, ಗಂಗೆಯಂತೆ ತುಂಗಭದ್ರಾ ನದಿಯನ್ನೂ ಏಕೆ ಸ್ವಚ್ಛಗೊಳಿಸಬಾರದು ಅನ್ನುವ ಯೋಚನೆ ಬಂದಿತ್ತು. ಊರು ನನ್ನದಾದ ಮೇಲೆ ನದಿ ನನ್ನದಾದ ಮೇಲೆ ಅದನ್ನು ಸಂರಕ್ಷಿಸುವ, ಕಾಯಿಲೆ ಬಿದ್ದಾಗ ಗುಣಪಡಿಸುವ ಹೊಣೆಯೂ ನಮ್ಮದಾಗಿದೆ. ಹೀಗಾಗಿ, ನಮ್ಮ ನೇತೃತ್ವದಲ್ಲಿ ಸ್ಥಳೀಯ ಪರಿಸರ ಸಂಘಟನೆ ನನ್ನ ಊರು ನನ್ನ ಹೊಣೆ ಜೊತೆ ಸೇರಿ ತುಂಗೆಯನ್ನು ಸ್ವಚ್ಛಗೊಳಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದೆವು ಎಂದು ಶ್ರೀಗಳು ತಿಳಿಸಿದ್ದಾರೆ.

ಎರಡು ವಾರ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಮಠದ ನೂರಾರು ಭಕ್ತರು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದ್ದರು. ಮಕರ ಸಂಕ್ರಮಣದ ಹಿನ್ನೆಲೆಯಲ್ಲಿ ಪುಣ್ಯಸ್ನಾನಕ್ಕೆ ಸಹಸ್ರಾರು ಭಕ್ತರು ಭೇಟಿ ನೀಡುವುದರಿಂದ ಹಾಗೂ ನದಿ ತಟದಲ್ಲಿಯೇ ಹಬ್ಬದೂಟ ಮಾಡಿ ಸವಿಯುವುದರಿಂದ ಗಂಗೆ ತಟದ ಸ್ವಚ್ಛತಾ ಕಾರ್ಯಕ್ರಮ ಹೆಚ್ಚು ಮಹತ್ವ ಪಡೆದುಕೊಂಡಿದೆ ಎಂದಿದ್ದಾರೆ.

ನಮ್ಮನ್ನು ಪೋಷಿಸಿರುವ ಪರಿಸರವನ್ನು ಯಾವತ್ತೂ ಮಲಿನಗೊಳಿಸಬಾರದು. ಪ್ರಮುಖವಾಗಿ ಜೀವ ನದಿಗಳು, ಅವು ಉಸಿರು ನೀಡುತ್ತವೆ. ಹಸಿರು ನೀಡುತ್ತವೆ. ಅನ್ನ ನೀಡುತ್ತವೆ.

ಗೊತ್ತಿರಲಿ ಸ್ವಚ್ಛ ಪರಿಸರ ಸ್ವಚ್ಛ ಭಾರತದ ಸಂಕೇತ. ತುಂಗೆ, ಗಂಗೆಯಂತೆ ಈಗ ಹೆಚ್ಚು ಪವಿತ್ರವಾಗಿ ಹರಿಯುತ್ತಿದ್ದಾಳೆ ಎನ್ನಲು ನಮಗೆ ಸಂತೋಷವಾಗುತ್ತಿದೆ ಎಂದು ತಮ್ಮ ಸಂದೇಶದಲ್ಲಿ ಶ್ರೀಗಳು ತಿಳಿಸಿದ್ದಾರೆ.

# ಪ್ರಾಣಿಗಳ ವಶ ಆದೇಶ ವಾಪಸ್ ಪಡೆಯಲು ಸುಪ್ರೀಂ ಸೂಚನೆ




ನವದೆಹಲಿ, ಜ. 4 - ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಯುವ ಕಾಯ್ದೆಯ ಅನ್ವಯ ವ್ಯಾಪಾರಿಗಳು ಹಾಗೂ ಸಾಗಣೆದಾರರ ಪ್ರಾಣಿಗಳನ್ನು ವಶಪಡಿಸಿಕೊಳ್ಳುವ 2017ರ ಅಧಿಸೂಚನೆಯನ್ನು ವಾಪಸ್ ಪಡೆಯಬೇಕು ಇಲ್ಲವೇ ಬದಲಿಸಬೇಕು ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಹಾಗೂ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಆದೇಶ ಹೊರಡಿಸಿದ್ದು, ಪ್ರಾಣಿಗಳು ಈ ವ್ಯಕ್ತಿಗಳ ಜೀವನಾಧಾರವಾಗಿವೆ. ಹೀಗಾಗಿ ವಶಪಡಿಸಿಕೊಳ್ಳಬಾರದು ಎಂದು ತಿಳಿಸಿದೆ.

ವ್ಯಕ್ತಿಗೆ ಶಿಕ್ಷೆಯಾಗುವುದಕ್ಕೆ ಮುಂಚೆಯೇ ಪ್ರಾಣಿಗಳನ್ನು ವಶಪಡಿಸಿಕೊಳ್ಳುವುದು ವಿರೋಧಾಭಾಸವಾಗಿದೆ. ಆರೋಪ ಸಾಬೀತಾಗಿರುವವರ ವಿರುದ್ಧ ಮಾತ್ರ ಕ್ರಮ ತೆಗೆದುಕೊಳ್ಳಬಹುದು ನ್ಯಾಯಾಲಯ ಹೇಳಿದೆ.

# ನಗರಕ್ಕೆ ನಾಳೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ



ದಾವಣಗೆರೆ, ಜ.4- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ನಾಡಿದ್ದು ದಿನಾಂಕ 6 ರ ಬುಧವಾರ ನಗರಕ್ಕೆ ಆಗಮಿಸಲಿದ್ದಾರೆ.

ಬೆಳಿಗ್ಗೆ 10 ಗಂಟೆಗೆ ನಗರಕ್ಕೆ ಆಗಮಿಸಿ, ಸ್ಥಳೀಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು. ಸಂಜೆ 4 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಕ್ರಮ ಮತ್ತು ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು.

# ಹೆಣ್ಣಿಗೆ ಸಾಕ್ಷರತೆಯ ಬೆಳಕು ತೋರಿದ ದೇಶದ ಮೊದಲ ಶಿಕ್ಷಕಿ ಸಾವಿತ್ರಿ ಫುಲೆ



**ಕೂಡ್ಲಿಗಿ**

ಕೂಡ್ಲಿಗಿ, ಜ.4- ಸಂಪ್ರದಾಯವಾದಿಗಳನ್ನು ದಿಟ್ಟವಾಗಿ ಎದುರಿಸಿ ಹೆಣ್ಣಿಗೆ ಶಿಕ್ಷಣ ಕೊಡುವ ಮೂಲಕ ಅಕ್ಷರದ ಬೆಳಕು ಚೆಲ್ಲಿದ ದೇಶದ ಮೊದಲ ಶಿಕ್ಷಕಿ ಸಾವಿತ್ರಿ ಬಾಫುಲೆ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬಳ್ಳಾರಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಬಿ. ಶಿವಾನಂದ ಅಭಿಪ್ರಾಯ ವ್ಯಕ್ತ ಪಡಿಸಿದರು.

ಪಟ್ಟಣದ ಮೇನ್ ಬಾಯ್ಸ್ ಶಾಲೆಯಲ್ಲಿ ಭಾನುವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ತಾಲ್ಲೂಕು ಘಟಕ ಕೂಡ್ಲಿಗಿ ವತಿಯಿಂದ ಭಾರತದ ಪ್ರಥಮ ಶಿಕ್ಷಕಿ, ಅಕ್ಷರದ ಅವ್ವ, ಬಾಲಕಿಯರ ಶಿಕ್ಷಣದ ಮಹತ್ವ ಸಾರಿದ ಮಾತೆ ಸಾವಿತ್ರಿ ಬಾ ಫುಲೆ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಾ,

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಶಿಕ್ಷಣದಿಂದ ವಂಚಿತರಾಗಿದ್ದ ಮಹಿಳೆಯರಿಗೆ ಶಿಕ್ಷಣವನ್ನು ಕೊಡುವ ಮೂಲಕ ಅಂಧ ಶ್ರದ್ಧೆಯನ್ನು ತೊಡೆದು, ಸಂಪ್ರದಾಯವಾದಿಗಳನ್ನು ದಿಟ್ಟವಾಗಿ ಎದುರಿಸಿ ಅಕ್ಷರದ ಬೆಳಕನ್ನು ಮಹಿಳೆಯರಾದಿಯಾಗಿ ದೀನ-ದಲಿತರಿಗೂ ನೀಡಿದ ಮಹಾತಾಯಿ ಸಾವಿತ್ರಿ ಬಾ ಫುಲೆ ಅವರು ನಮಗೆಲ್ಲಾ ಪೂಜ್ಯನೀಯರು. ಅವರ ಆದರ್ಶಗಳು ನಮ್ಮ ಶಿಕ್ಷಕರಿಗೆ ಹಾಗೂ ಸಮಾಜಕ್ಕೆ ಸದಾ ದಾರಿದೀಪವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಕೊಟ್ರೇಶ್ ಗೌಡ, ಜಿಲ್ಲಾ ಉಪಾಧ್ಯಕ್ಷರಾದ ಗೀತಾ ವಿ, ಉಪಾಧ್ಯಕ್ಷರಾದ ಹನುಮಂತಪ್ಪ ಹೆಚ್.ಜಿ, ಹೆಚ್. ಇಂದಿರ, ಸಹಕಾರ್ಯದರ್ಶಿಗಳಾದ ಗೀತಾ ಭಾಪ್ರಿ, ಪ್ರತಿನಿಧಿಗಳಾದ ಪಿ. ವಿ. ಕೊತ್ಲಪ್ಪ, ಕೆ. ಜಿನಾಬಿ ಪುಟ್ಟಪ್ಪ, ಎನ್.ಪಿ.ಎಸ್. ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಲ್. ದಯಾನಂದ್ ಮತ್ತಿತರರು ಉಪಸ್ಥಿತರಿದ್ದರು.


# ನಗರದಲ್ಲಿ ಇಂದು-ನಾಳಿನ ಮಹೇಶ್ವರ ಸ್ವಾಮಿ ಜಾತ್ರೆ ರದ್ದು

ಕಾಯಿಪೇಟೆಯ ಶ್ರೀ ಬಸವೇಶ್ವರ ಸೇವಾ ಸಂಘದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ನಡೆಯಬೇಕಿದ್ದ ಶ್ರೀ ಮಹೇಶ್ವರ ಜಾತ್ರೆಯನ್ನು ರದ್ದುಪಡಿಸಲಾಗಿದೆ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್ 19 ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಯನ್ವಯ ಪಿ.ಬಿ. ರಸ್ತೆ ಶ್ರೀ ಪೂಜಾ ಹೋಟೆಲ್ ಪಕ್ಕದಲ್ಲಿ ಇಂದು ಮತ್ತು ನಾಳೆ ನಡೆಸಲುದ್ದೇಶಿಸಿದ್ದ ಮಹೇಶ್ವರ ಜಾತ್ರೆಯನ್ನು ರದ್ದುಪಡಿಸಲಾಗಿದ್ದು, ಭಕ್ತಾದಿಗಳು ಸಹಕರಿಸುವಂತೆ ಪದಾಧಿಕಾರಿಗಳು ವಿನಂತಿಸಿದ್ದಾರೆ.

# ಮುದ್ನಾಳ್ ಬಸವಣ್ಣ ದೇವಸ್ಥಾನದಲ್ಲಿ ಇಂದು ಶ್ರೀ ಮಹೇಶ್ವರ ಸ್ವಾಮಿ ಜಾತ್ರೆ





ದಾವಣಗೆರೆ ಎಸ್. ಎಸ್. ಬಡಾವಣೆ 'ಎ' ಬ್ಲಾಕ್ ನ ಮುದ್ನಾಳ್ ಬಸವಣ್ಣ ದೇವಸ್ಥಾನದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಇಂದು ಜರುಗಲಿದೆ.

ಶಾ ಮ ನೂ ರು ಗ್ರಾಮಸ್ಥರು ಹಾಗೂ ಬಡಾವಣೆಗಳ ನಾಗರಿಕರ ಸಹಕಾರದೊಂದಿಗೆ ಮಹೇಶ್ವರ ಸ್ವಾಮಿ ಜಾತ್ರೆ ನಡೆಯಲಿದ್ದು, ಶ್ರೀ ಸ್ವಾಮಿಗೆ ವಿಶೇಷ ಪೂಜೆ ನೆರವೇರಲಿದೆ ಎಂದು ಶಾಮನೂರು ಮುದ್ನಾಳ್ ಬಸವಣ್ಣ ದೇವರ ಅಭಿವೃದ್ಧಿ ಸಮಿತಿ ಸಂಸ್ಥಾಪಕ ಅಧ್ಯಕ್ಷರೂ ಆದ ಮಾಜಿ ದೂಡಾ ಅಧ್ಯಕ್ಷ ಜಿ. ಹೆಚ್. ರಾಮಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಶಾಮನೂರು ಟಿ. ಬಸಪ್ಪ ಅವರುಗಳು ತಿಳಿಸಿದ್ದಾರೆ.

# ನಿಟುವಳ್ಳಿಯಲ್ಲಿ ಇಂದು ದುರ್ಗಾಂಬಿಕಾದೇವಿ ಕಾರ್ತಿಕ



ನಿಟುವಳ್ಳಿ ಶ್ರೀ ದುರ್ಗಾಂಬಿಕ ದೇವಸ್ಥಾನ ಟ್ರಸ್ಟ್ ವತಿಯಿಂದ ಇಂದು ಸಂಜೆ 6 ಗಂಟೆಗೆ ಗ್ರಾಮದೇವತೆ ನಿಟುವಳ್ಳಿ ಶ್ರೀ ದುರ್ಗಾಂಬಿಕ ದೇವಿ ಕಾರ್ತಿಕೋತ್ಸವ, ಮಹಾಮಂಗಳಾರತಿ, ದೀಪೋತ್ಸವ ಜರುಗಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಎಚ್.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

# ರಾಣೇಬೆನ್ನೂರಿನಲ್ಲಿ ಇಂದು ತುಕ್ಕಾಭವಾನಿ ಕಾರ್ತಿಕೋತ್ಸವ



ದೊಡ್ಡ ಪೇಟೆಯ ತುಕ್ಕಾಭವಾನಿ ದೇವಸ್ಥಾನದಲ್ಲಿ ಇಂದು ಸಂಜೆ 6ಕ್ಕೆ ಕಾರ್ತಿಕೋತ್ಸವ ಏರ್ಪಡಿಸಲಾಗಿದೆ. ಇದರ ಅಂಗವಾಗಿ ತುಕ್ಕಾಭವಾನಿ ದೇವಿಗೆ ವಿಶೇಷ ಅಲಂಕಾರ ಹಾಗೂ ಪೂಜೆ ಸಲ್ಲಿಸಲಾಗುವುದು ಎಂದು ತುಕ್ಕಾ ಭವಾನಿ ಸೇವಾ ಸಮಿತಿ ಕ್ಷತ್ರಿಯ ಶಿವಾಜಿ ಮರಾಠ ಸಮಾಜದ ಶಹರ ಘಟಕದ ಅಧ್ಯಕ್ಷ ಶಿವಮೂರ್ತಿ ದಿಲ್ಲಿವಾಲಾ ತಿಳಿಸಿದ್ದಾರೆ.

# ನೆಚ್ಚಿನ ಉಪನ್ಯಾಸಕಿಗಾಗಿ ಹೋರಾಟಕ್ಕಿಳಿದ ವಿದ್ಯಾರ್ಥಿಗಳು





ದಾವಣಗೆರೆ, ಜ.4- ಕಾಲೇಜಿನ ನೆಚ್ಚಿನ ಉಪನ್ಯಾಸಕಿಯನ್ನು ಕೆಲಸದಿಂದ ತೆಗೆದು ಹಾಕಿರುವುದಕ್ಕೆ ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದಲ್ಲದೇ, ಆ ಉಪನ್ಯಾಸಕಿಯನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಆಡಳಿತ ಮಂಡಳಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಿರುವ ಘಟನೆ ಇಲ್ಲಿನ ಬಾಡಾ ಕ್ರಾಸ್‌ನಲ್ಲಿನ ಜೈನ್ ಕಾಲೇಜಿನಲ್ಲಿ ಇಂದು ನಡೆಯಿತು.

ಕೊರೊನಾದಿಂದ ದೂರ ಉಳಿದಿದ್ದ ಕಾಲೇಜು ವಿದ್ಯಾರ್ಥಿಗಳು ಹೊಸ ವರ್ಷಕ್ಕೆ ಕಾಲೇಜು ಆರಂಭವಾದಾಗ ಅವರ ನೆಚ್ಚಿನ ಅತಿಥಿ ಉಪನ್ಯಾಸಕರಾದ ಶಶಿಕಲಾ ಅವರನ್ನು ಕೆಲಸದಿಂದ ಆಡಳಿತ ಮಂಡಳಿ ತೆಗೆದು ಹಾಕಿದ ವಿಚಾರ ತಿಳಿದ ವಿದ್ಯಾರ್ಥಿಗಳು, ಶಶಿಕಲಾ ಅವರಿಗಾಗಿ ಹೋರಾಟ ನಡೆಸಿ, ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಶಿಕಲಾ ಸರಿಯಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಕಾಲೇಜ್‌ನ ಕೆಲ ವಿದ್ಯಾರ್ಥಿಗಳು ಅವರ ವಿರುದ್ದ ದೂರು ನೀಡಿದ್ದರು. ಅವರು ಪಾಠ ಕೇಳುತಿದ್ದ ವಿದ್ಯಾರ್ಥಿಗಳ ಗುಣಮಟ್ಟ ಕಡಿಮೆಯಾಗಿತ್ತು. ಹೀಗಾಗಿ, ಉಪನ್ಯಾಸಕಿಯನ್ನು ಕೆಲಸದಿಂದ ರಿಲೀವ್ ಮಾಡಲಾಗಿದೆ ಎಂಬುದಾಗಿ ಜೈನ್ ಕಾಲೇಜಿನ ಪ್ರಾಂಶುಪಾಲ ಸದಾನಂದ ತಿಳಿಸಿದ್ದರು. ಈ ಉತ್ತರದಿಂದ ವಿದ್ಯಾರ್ಥಿಗಳು ಮತ್ತಷ್ಟು ಆಕ್ರೋಶಗೊಂಡು, ಆಡಳಿತ ಮಂಡಳಿ ನಿರ್ದೇಶಕಿ ನಿಖಿತಾ, ಪ್ರಾಂಶುಪಾಲ ಸದಾನಂದ ವಿರುದ್ಧ ವಾಗ್ವಾದಕ್ಕಿಳಿದರು.

ಶಶಿಕಲಾ ಅವರನ್ನು ಡಿಸೆಂಬರ್ 30ರಂದು ರಿಲೀವ್ ಮಾಡಲಾಗಿದೆ. ಕಾರಣವಿಲ್ಲದೇ ಉಪನ್ಯಾಸಕಿ ಶಶಿಕಲಾ ಅವರನ್ನು ಕೆಲಸದಿಂದ ವಜಾಗೊಳಿಸಲಾಗಿದೆ. ಇದನ್ನು ನೋಡಿದರೆ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರ ಕುತಂತ್ರ ಎಂದು ವಿದ್ಯಾರ್ಥಿಗಳು ದೂರಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ ಸ್ಥಳಕ್ಕಾಗಮಿಸಿದ ವಿದ್ಯಾನಗರ ಪೊಲೀಸರು ವಿದ್ಯಾರ್ಥಿಗಳು ಮತ್ತು ಆಡಳಿತ ಮಂಡಳಿಯವರನ್ನು ಠಾಣೆಗೆ ಕರೆದು ವಿಚಾರಣೆ ನಡೆಸುತ್ತಿದ್ದಾರೆ.

ಇತ್ತೀಚೆಗಷ್ಟೇ ಇದೇ ವಿಚಾರವಾಗಿ ಪ್ರತಿಭಟಿಸಿದ್ದ ವಿದ್ಯಾರ್ಥಿಗಳು, ಉಪನ್ಯಾಸಕರಾದ ಶಶಿಕಲಾ ಅವರನ್ನು ಪುನಃ ಸೇರಿಸಿಕೊಳ್ಳುವಂತೆ ಕಾಲೇಜು ಆಡಳಿತ ಮಂಡಳಿಗೆ ಒತ್ತಾಯಿಸಿದ್ದರು.


॥ ಶ್ರೀ ಹಂಪಿ ವಿರೂಪಾಕ್ಷೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ನುಗ್ಗಿಹಳ್ಳಿ ದಿ॥ ಶ್ರೀ ಎಂ. ರಾಜಪ್ಪನವರು
(ನಿವೃತ್ತ ನೌಕರರು, D.S.C. Ltd, ಕುಕ್ಕುವಾಡ)

ದಾವಣಗೆರೆ ಸಿಟಿ ವಿದ್ಯಾನಗರ, ವಿನಾಯಕ ಬಡಾವಣೆ ವಾಸಿ
ಶ್ರೀಮತಿ ಶ್ರೀ ಎಂ.ಆರ್. ಸಂತೋಷ್
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 1.1.2021ನೇ ಶುಕ್ರವಾರ ಮಧ್ಯಾಹ್ನ 12.00ಕ್ಕೆ ನನ್ನ ಪೂಜ್ಯ ತಂದೆಯವರಾದ
ನುಗ್ಗಿಹಳ್ಳಿ ದಿ॥ ಶ್ರೀ ಎಂ. ರಾಜಪ್ಪನವರು
(ನಿವೃತ್ತ ನೌಕರರು, D.S.C. Ltd, ಕುಕ್ಕುವಾಡ)
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆ ಯನ್ನು
ದಿನಾಂಕ5.01.2021 ನೇ ಮಂಗಳವಾರ ಬೆಳಿಗ್ಗೆ 10-30ಕ್ಕೆ
ಶ್ರೀ ಈಶ್ವರಪ್ಪ ಪಾರ್ವತಿ ದೇವಸ್ಥಾನ, ವಿದ್ಯಾನಗರ,
ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು
ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತ ಆತ್ಮಕ್ಕೆ
ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಮೊ : 99725 85653

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ವಿಕಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಶುಕ್ರವಾರ, 8 ಜನವರಿ 2021 ಸಮಯ: ಬೆಳಿಗ್ಗೆ 11ರಿಂದ ಸಂಜೆ 5ರ ವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ

ನೋಂದಣಿಗಾಗಿ ಕರೆಮಾಡಿ: 96869 29090

ಸೂಚನೆ: ಮಾಸ್ಕ್ ಹಾಗೂ ಹ್ಯಾಂಡ್ ಸ್ಯಾನಿಟೈಸರ್ ಬಳಸಿ. ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte